# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XVIII - 3 ಮಾರ್ಚ್ 2001

### ಈ ಸಂಚಿಕೆಯಲ್ಲಿ


| | | |
|---|---|---|
| ಅಸೋಸಿಯೇಷನ್ನಿನಲ್ಲಿ | | 2 |
| ಕರ್ನಾಟಕ ಸಾಂಸ್ಕೃತಿಕ ಪರಂಪರೆ | ● ಸುಮಾದ್ವಾರಕಾನಾಥ್ | 3 |
| ಚಿತ್ಪಾಲರ ಬದುಕು ಬರಹ | ● ಮೇಧಾ ಎಮ್. ಕುಲಕರ್ಣಿ | 5 |
| ಕವನ : | | |
| ಕನ್ನಡ ಭಾಷೆಯ ಚರಿತ್ರೆ | ● ಮೇಧಾ ಎಮ್. ಕುಲಕರ್ಣಿ | 6 |
| ದಾಸ ಸಾಹಿತ್ಯದ ಪ್ರೇರಣೆಗಳು | ● ಡಾ. ತಾಳ್ತಜೆ ವಸಂತ ಕುಮಾರ | 7 |
| ಕೃತಿ ವಿಮರ್ಶೆ: | | |
| ಕನ್ನಡ ಕಾವ್ಯ ಮೀಮಾಂಸೆ: ಎಸ್. ಎಂ. ಹಿರೇಮಠ | ● ಡಾ. ಜಿ. ಎನ್. ಉಪಾಧ್ಯ | 10 |
| ಪ್ರತಿಕ್ರಿಯೆ: | | |
| ಜೀವನ ಪ್ರೀತಿಯ ಪಾಠ | ● ಅಹಲ್ಯಾ ಬಲ್ಲಾಳ | 11 |
| Shraddha - A Laudable Effort | | 12 |
| "Shraddha" - My Impressions | ● Smt. Bharathi Prasad | 12 |
| The Street Children & The Role Of NGO's | ● Smt. Tara Saha | 13 |
| ಸುತ್ತ-ಮುತ್ತ | | 14 |



The Mysore Association, Mumbai

393. Bhaudaji Road. Matunga. Mumbai-400 019.

Tel.: 402 46 47 ● Grams: "KARUNADU"

ಅಸೋಸಿಯೇಷನ್ನಲ್ಲಿ

## ಶಿವರಾತ್ರಿಯ ಕಾರ್ಯಕ್ರಮ

ಶಿವರಾತ್ರಿ - ಈಶ್ವರನ ಆರಾಧನೆ, ಮಾಘ ಮಾಸದ ಕೃಷ್ಣಪಕ್ಷದ ತ್ರಯೋದಶಿಯಂದು ಶಿವರಾತ್ರಿಯು ಬರುತ್ತದೆ. ಶಿವರಾತ್ರಿಯ ವ್ರತವು ಬಹಳ ಮಹತ್ತರವಾದದ್ದು ಹಾಗೂ ಕಠಿಣವಾದದ್ದು, ಪೂರ್ವದಲ್ಲಿ ಶಿವಪಾದನೆಂಬ ಬಡಬ್ರಾಹ್ಮಣ ನಿದ್ದನು. ಅವನು ಬಹಳ ನಿಷ್ಠಾವಂತ ಶಿವಭಕ್ತ, ಆದರೆ ವ್ರತ ಮಾಡಲು ಅನುಕೂಲವಿಲ್ಲದ ಬಡತನ, ಶಂಭು ಎಂಬುವನು ವ್ರತವನ್ನು ಮಾಡುತ್ತಿದ್ದಾಗ ಅವನಿಗೆ ಶ್ರದ್ಧೆಯಿಂದ ಸಹಾಯ ಮಾಡಿದ ಮಾತ್ರಕ್ಕೆ ಅವನ ಬಡತನವು ನೀಗಿ ಮುಂದೆ ಸುಖವಾಗಿದ್ದನು ಎಂಬ ಒಂದು ಕಥೆ ಹೇಳುತ್ತಾರೆ.

ಭಾರತದ ಎಲ್ಲೆಡೆಯಲ್ಲೂ ಶಿವರಾತ್ರಿಯನ್ನು ಅವರವರ ಧರ್ಮಾನುಸಾರ ಆಚರಿಸುತ್ತಾರೆ. ವಿಷ್ಣುವಿನಂತೆಯೇ ಈಶ್ವರನಿಗೂ ಅನೇಕ ಹೆಸರುಗಳು, ನೀಲಕಂಠ, ಶಂಕರ, ಚಂದ್ರಶೇಖರ ಕೈಲಾಸವಾಸಿ, ಕಾಲಕಾಲಾ, ತ್ರಿಪುರಾಂತಕ ಹೀಗೆ, ಈಶ್ವರನು ಸಾಮಗಾನ ಪ್ರಿಯ,

ಅಸೋಸಿಯೇಷನ್ನಿನಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಶಿವರಾತ್ರಿಯ ಕಾರ್ಯಕ್ರಮವನ್ನು ನಡೆಸಲಾಯಿತು. ''ಧ್ಯಾನವು ಕಲಿಯುಗದಲ್ಲಿ....'' ಎಂಬಂತೆ ಅಸೋಸಿಯೇಷನ್ನಿನ ಸದಸ್ಯರು ಈಶ್ವರನ ಧ್ಯಾನ ಮಾಡಿದರು. ಸಂಜೆ 7-00 ಘಂಟೆಗೆ ಶ್ರೀಮತಿ ಸೀತಮ್ಮ ರಾವ್ ಅವರ ನೇತೃತ್ವದಲ್ಲಿ ಒಂದು ಭಜನಾ ಕಾರ್ಯಕ್ರಮವು ನಡೆಯಿತು. ಶ್ರೀ ಪ್ರಸಾದ್‌ರವರು ಸ್ವಾಗತ ಕೋರಿದರು. ನಂತರ ಶ್ರೀಮತಿ ಸೀತಮ್ಮನವರು ಗಣಪತಿಯ ಸ್ತುತಿಯೊಂದಿಗೆ ಕಾರ್ಯಕ್ರಮವನ್ನು ಆರಂಭಿಸಿದರು. ನಂತರ ಶ್ರೀಮತಿ ಭಾರತಿ ಮತ್ತು ಸಂಗಡಿಗಳು ಒಂದು ಗಂಟೆಯ ಕಾಲ ''ಸಾಮಗಾನ ಪ್ರಿಯ''ನಾದ ಈಶ್ವರನನ್ನು ಅನೇಕ ಹಾಡುಗಳಿಂದ ಧ್ಯಾನ ಮಾಡಿದರು. ನಂತರ ಸೀತಮ್ಮನವರು ಈಶ್ವರನ ಕುರಿತು ಒಂದೆರಡು ಹಾಡನ್ನು ಹಾಡಿದರು. ಶ್ರೀ ಪ್ರಸಾದ್‌ರವರು ವಂದನಾರ್ಪಣೆ ಮಾಡಿದರು. ನಂತರ ಈಶ್ವರನ ಪೂಜೆ, ಮಂಗಳಾರತಿ ಪ್ರಸಾದ ವಿನಿಯೋಗದಿಂದ ಕಾರ್ಯಕ್ರಮವು ಮುಗಿಯಿತು. ರಜಾದಿನವಾದ್ದರಿಂದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿದ್ದರು.

-- ರಮಾವಸಂತ್.

## ಕಣ್ಮರೆಯಾದ ಡಾ. ಜೀವರಾಜ್ ಆಳ್ವ



*ಡಾ। ಜೀವರಾಜ್ ಆಳ್ವರು ಅಸೋಸಿಯೇಷನ್ನಿಗೆ ಭೇಟಿ ನೀಡಿದ ಸನ್ನಿವೇಶ.*

ಸಂಯುಕ್ತ ದಳದ ನಾಯಕ, ಮಾಜಿ ಸಚಿವ ಡಾ। ಜೀವರಾಜ್ ಆಳ್ವ ಅವರು ಫೆಬ್ರವರಿ 12ನೇ ತಾರೀಖು ಸೋಮವಾರದಂದು ವಿಧಿವಶರಾದರು. ಕೆಲವು ದಿನಗಳಿಂದ ಅನಾರೋಗ್ಯದಿಂದ ನರಳುತ್ತಿದ್ದವರು, ಅವರನ್ನು ಉಳಿಸಲು ಸಾಧ್ಯವಿದ್ದ ಎಲ್ಲ ಪ್ರಯತ್ನಗಳನ್ನು ಮಾಡಿದರು. ಆದರೆ ವಿಧಿಯಾಟದ ಮುಂದೆ ಮನುಷ್ಯನ ಪ್ರಯತ್ನಗಳೆಲ್ಲಾ ನಿಷ್ಫಲ, ವಿಧಿಯು ತನ್ನೆಡೆಗೇ ಸೆಳೆಯಿತು.

ಇವರದು ವರ್ಣರಂಜಿತ ವ್ಯಕ್ತಿತ್ವ, ವಿದ್ಯಾರ್ಥಿ ದೆಸೆಯಲ್ಲೇ ರಾಜಕಾರಣವನ್ನು ಸೇರಿದ್ದರು. ವೈದ್ಯರಾದರೂ ಆರಿಸಿಕೊಂಡ ಕಾರ್ಯಕ್ಷೇತ್ರ ರಾಜಕೀಯ, ರಾಜಕೀಯ ಮನೆತನವೆನ್ನ ಬಹುದೇನೋ. ಏಕೆಂದರೆ ತಂದೆ ದಿ. ಡಾ. ನಾಗಪ್ಪ ಆಳ್ವ ಅವರೂ ರಾಜ್ಯ ಸಚಿವರಾಗಿದ್ದರು. ರಾಜಕೀಯಕ್ಕೆ ಬರಲು ತಂದೆಯ ಪ್ರಭಾವವೂ ನೆರವಾಯಿತು. ಜಯ ಪ್ರಕಾಶ್ ನಾರಾಯಣ ನೇತೃತ್ವದ ಚಳುವಳಿಯಲ್ಲಿ ಧುಮುಕಿ ಜನತಾ ಪಕ್ಷ ಸೇರಿದರು. ರಾಜಕಾರಣದಲ್ಲಿ ಒಂದೊಂದೇ ಹಂತವನ್ನೇರುತ್ತಾ ಬಂದರು. ಕರ್ನಾಟಕ ಕ್ರಾಂತಿರಂಗದ ಸಂಸದೀಯ ಮಂಡಳಿಯ ಸದಸ್ಯರಾದರು. ವಿಧಾನ ಸಭೆಯ ಸದಸ್ಯರಾದರು. ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರ ಸಚಿವ ಸಂಪುಟದಲ್ಲಿ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಜನ ಸೇವಾ ಇಲಾಖೆಯ ಸಚಿವರೂ ಆದರು. ಎರಡು ಬಾರಿ ವಿಧಾನ ಸಭೆಗೆ ಚುನಾಯಿತರಾದರು. ಮಾಜಿ ಪ್ರಧಾನಿ ದೇವೇಗೌಡರು ಹಾಗೂ ರಾಮಕೃಷ್ಣ ಹೆಗಡೆ ಅವರ ವರ್ಚಸ್ಸಿನ ಕಾಳಗದಿಂದಾಗಿ ಒಡೆದಿದ್ದ ಜನತಾಪಕ್ಷವನ್ನು ಒಂದು ಗೂಡಿಸುವಲ್ಲಿ ಅಪಾರವಾಗಿ ಶ್ರಮಿಸಿದ್ದರು. ಹೆಗಡೆ ಅವರ ಬಲಗೈಯಾಗಿ ನಿಂತು ರಾಷ್ಟ್ರ ನವನಿರ್ಮಾಣ ವೇದಿಕೆ ಹಾಗೂ ಲೋಕ ಶಕ್ತಿಗಳನ್ನು ಕಟ್ಟಿದ್ದು ಐತಿಹಾಸಿಕ.

ರಾಜಕೀಯ ರಂಗದಲ್ಲಿದ್ದರೂ ಸಾಂಸ್ಕೃತಿಕ ರಂಗದಲ್ಲಿ ಬಹಳ ಆಸಕ್ತಿಯನ್ನು ಹೊಂದಿದ್ದರು. ಕಲೆಗೆ ಬಹಳ ಪ್ರೋತ್ಸಾಹಿತರಾಗಿದ್ದರು. ಅನೇಕ ನಾಟಕ ತಂಡಗಳಿಗೆ, ಸಾಂಸ್ಕೃತಿಕ ವೇದಿಕೆಗಳಿಗೆ ಅಧ್ಯಕ್ಷರೂ ಪೋಷಕರೂ ಆಗಿದ್ದರು. ಡಾ. ಜೀವರಾಜ್ ಆಳ್ವರವರು ನಮ್ಮ ಮೈಸೂರು ಅಸೋಸಿಯೇಷನ್ನಿನ ಕಾರ್ಯಚಟುವಟಿಕೆಗಳ ಬಗ್ಗೆ ಹಾಗೂ ಮುಂಬೈನಲ್ಲಿರುವ ಕನ್ನಡಿಗರ ಕನ್ನಡ ಭಾಷಾಭಿಮಾನ, ಕನ್ನಡಿಗರ ಕನ್ನಡ ಭಾಷಾಭಿಮಾನ, ಕನ್ನಡ ಭಾಷೆಯ ಭದ್ರ ನೆಲೆ ಹಾಗೂ ಕರ್ನಾಟಕದ ನಡೆ ನುಡಿಯ ಬಗ್ಗೆ ಇಲ್ಲಿನ ಜನರ ಉತ್ಸಾಹವನ್ನು ಕಂಡು ಬಹಳ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದರು. ಕರ್ನಾಟಕದ 'ಜೀವಾಳ' ಜೀವರಾಜ ಆಳ್ವ ಎಂಬುತ್ತಿದ್ದರು.

ಆಳ್ವ ಅವರಿಗೆ ಅಸೋಸಿಯೇಷನ್ನಿನ ಬಗ್ಗೆ ಅಪಾರ ಪ್ರೀತಿ. ಯಾವಾಗಲೂ ನೆರವಾಗಲು ಸಿದ್ಧರಾಗಿದ್ದರು. ಅವರ ಅಗಲಿಕೆಯಿಂದ ಕನ್ನಡಿಗರಿಗೆ ತುಂಬಲಾರದ ನಷ್ಟವಾಗಿದೆ. ದೇವರು ಮೃತರ ಆತ್ಮಕ್ಕೆ ಶಾಂತಿಯನ್ನು ನೀಡಲಿ ಹಾಗೂ ಕುಟುಂಬ ವರ್ಗದವರಿಗೆ ಈ ಒಂದು ದುಃಖವನ್ನು ಸಹಿಸುವ ಶಕ್ತಿಯನ್ನು ಕೊಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸೋಣ.

-- ರಮಾವಸಂತ

ಕರ್ನಾಟಕ ಸಾಂಸ್ಕೃತಿಕ ಪರಂಪರೆ

# ವಿಜಯ ನಗರ ಸಾಮ್ರಾಜ್ಯ

ಸುಮಾ ದ್ವಾರಕನಾಥ

ವಿಜಯ ನಗರದ ಸ್ಥಾಪನೆ ಭಾರತದ ಇತಿಹಾಸದಲ್ಲಿ ಚಿರಸ್ಮರಣೀಯವಾದುದು. ಮುಸ್ಲಿಮರ ಧಾಳಿ ಹೊಡೆತಗಳಿಂದ ಜರ್ಝರಿತವಾಗಿದ್ದ ಹಿಂದೂ ಧರ್ಮದ ಶ್ರೀರಕ್ಷೆಯಾಗಿ ಉದಯವಾದ ಇದು ರಾಜಕೀಯ ಅಸ್ಥಿರತೆಯನ್ನು ತೊಡೆದು ಹಾಕಿದುದಲ್ಲದೆ, ಸತತವಾಗಿ ಎರಡು ಶತಮಾನಗಳಿಗೂ ಅವರನ್ನು ಹೆಚ್ಚು ಕಾಲ ಅವರನ್ನು ತಡೆ ಹಿಡಿಯಿತು. ಹದಿನಾಲ್ಕನೆಯ ಶತಮಾನದ ಆದಿಭಾಗದ ವೇಳೆಗೆ ಹೊಯ್ಸಳರು ತಮ್ಮನ್ನು ತಾವೇ ರಕ್ಷಿಸಿಕೊಳ್ಳದಾದರು. ದೇವಗಿರಿಯ ಸೇವುಣರು ಅವನತಿಯ ಹಾದಿಯಲ್ಲಿದ್ದರು. ಇಂತಹ ಸಂದಿಗ್ಧ ಸಮಯದಲ್ಲಿ ಉದಯವಾದ ವಿಜಯ ನಗರದ ಸಾಮ್ರಾಜ್ಯ ಭಾರತದ ಇತಿಹಾಸದಲ್ಲೇ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಟ್ಟ ಕಡೆಯ ಹಿಂದೂ ಸಾಮ್ರಾಜ್ಯ. ಇದು ಅಸ್ತಿತ್ವಕ್ಕೆ ಬಂದುದು ಕ್ರಿ.ಶ. ೧೩೩೬ರಲ್ಲಿ. ಇದಾದ ಹತ್ತು ವರ್ಷಗಳಲ್ಲೇ ಬಹಮನಿ ರಾಜ್ಯವೂ ಅಸ್ತಿತ್ವಕ್ಕೆ ಬಂದಿತು. ಮುಂದೆ ಈ ಎರಡು ರಾಜ್ಯಗಳು ರಾಜಕೀಯ ರಣರಂಗದ ಸೆಣಸಾಟದಲ್ಲಿ ದೀರ್ಘ ಕಾಲ ಹೋರಾಟ ನಡೆಸಿದವು. ಬಹುಕಾಲ ಅಗೋಚರವಾಗಿಯೇ ಇದ್ದ ಈ ಸಾಮ್ರಾಜ್ಯದ ಬಗ್ಗೆ ಜರ್ಮನಿಯ ವಿದ್ವಾಂಸ ರಾಬರ್ಟ್ ಸೀವೆಲ್ 'ಮರೆತ ಸಾಮ್ರಾಜ್ಯ' (A forgoten empirs) ಎಂಬ ಕೃತಿಯನ್ನು ಪ್ರಕಟಿಸಿ ಮೊದಲಿಗೆ ಅದರ ಭವ್ಯ ಇತಿಹಾಸದ ಮೇಲೆ ಬೆಳಕು ಚೆಲ್ಲಿದರು.

ವಿಜಯ ನಗರ ಇತಿಹಾಸ ಅಧ್ಯಯನಕ್ಕೆ ವಿಪುಲ ಐತಿಹಾಸಿಕ ಸಾಮಗ್ರಿಗಳಿದ್ದರೂ ಈ ಅಧ್ಯಾಯದಲ್ಲಿ ಹಲವಾರು ಕ್ಲಿಷ್ಟ ಸಮಸ್ಯೆಗಳು ಉಳಿದುಕೊಂಡಿವೆ. ಅವುಗಳಲ್ಲಿ ಮುಖ್ಯವಾಗಿ ವಿಜಯನಗರ ಸ್ಥಾಪಕರು ಕನ್ನಡಿಗರೇ ಅಥವಾ ತೆಲುಗರೇ ಎಂದು. ಹರಿಹರ ಹಾಗೂ ಅವನ ಸೋದರರು ಹೊಯ್ಸಳ ಸೇನಾನಿಗಳಾಗಿದ್ದು ಮುಂದೆ ಸ್ವತಂತ್ರ ಸಾಮ್ರಾಜ್ಯ ಕಟ್ಟಿದ್ದಾರೆಂಬ ಕನ್ನಡ ಮೂಲವಾದಕ್ಕೆ ಈಗ ಹೆಚ್ಚು ಆಧಾರಗಳು ಸಿಕ್ಕಿವೆ. ವಿವಿಧ ಅಭಿಪ್ರಾಯಗಳೇನೇ ಇರಲಿ, ಒಟ್ಟಿನಲ್ಲಿ ಕನ್ನಡ ವಂಶದ ಸಂಗಮನ ಮಕ್ಕಳಾದ ಹರಿಹರ ಬುಕ್ಕರು ವಿಜಯನಗರದ ಸ್ಥಾಪಕರು ಎಂಬುದರಲ್ಲಿ ಸಂದೇಹವಿಲ್ಲ. ಅವರು ರಾಜಧಾನಿ ನಿರ್ಮಿಸಿದ ಸ್ಥಳ ಪೌರಾಣಿಕವಾಗಿ, ಐತಿಹಾಸಿಕವಾಗಿ ಪ್ರಸಿದ್ಧವಾದುದು. ತುಂಗಭದ್ರಾ ತೀರದಲ್ಲಿರುವ ಪಂಪಾವಿರೂಪಾಕ್ಷನ ದಿವ್ಯ ಸನ್ನಿಧಿಯಲ್ಲಿ ೧೩೩೬ರಲ್ಲಿ ಹರಿಹರನು ವಿಜಯ ನಗರದ ಪ್ರಪ್ರಥಮ ಪ್ರಭುವಾಗಿ ಅಭಿಷಿಕ್ತನಾದನು. ಅಲ್ಲಿ ನಿರ್ಮಿತವಾದ ರಾಜಧಾನಿಗೆ ಕೊಟ್ಟ ಹೆಸರು ವಿಜಯನಗರ ಅಥವಾ ವಿದ್ಯಾನಗರ. ಮುಂದೆ ಆ ರಾಜ್ಯ 'ವಿಜಯ' ಮತ್ತು ವಿದ್ಯೆಗಳೆರಡನ್ನೂ ಅದ್ವಿತೀಯವಾದ ರೀತಿಯಲ್ಲಿ ನಡೆದು ಆ ಹೆಸರುಗಳನ್ನು ಅನ್ವರ್ಥಕಗೊಳಿಸಿಕೊಂಡಿತು. ಕ್ರಿ.ಶ. ೧೩೩೬ರಿಂದ ೧೫೬೫ರ ವರೆಗಿನ ಕಾಲ ವಿಜಯನಗರದ ವೈಭವದ ಕಾಲ ಎನ್ನಬಹುದು. ಕ್ರಿ.ಶ. ೧೫೬೫ರಿಂದ ೧೬೩೬ರ ವರೆಗೆ ವಿಜಯ ನಗರ ಅರಸರ ಇಳಿಮುಖ ಕಾಲ. ಈ ಸಾಮ್ರಾಜ್ಯದ ವೈಭವ ಕಾಲದಲ್ಲಿ ಮೂರು ಪ್ರತ್ಯೇಕ ಮತ್ತು ಯಾವ ರೀತಿಯ ರಕ್ತ ಸಂಬಂಧವಿಲ್ಲದ ಸಂಗಮ, ಸಾಳುವ, ತುಳುವ ಅರಸು ಮನೆತನಗಳು ಆಳಿ ಮೆರೆದವು. ಸಂಗಮ ವಂಶವು ಕನ್ನಡಿಗರಾಗಿದ್ದರೆ, ಸಾಳುವ ಮತ್ತು ತುಳುವ ಅರಸು ಮನೆತನದವರು ಆಂಧ್ರ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿದ್ದರು. ಸಂಗಮ ವಂಶ ವಿಜಯನಗರದ ಸಾಮ್ರಾಜ್ಯದ ಬುನಾದಿಯನ್ನು ಹಾಕಿತು. ದಸ ದಿಕ್ಕುಗಳಲ್ಲಿ ತಮ್ಮ ಪರಾಕ್ರಮ, ಕೀರ್ತಿ ಮತ್ತು ವೈಭವಗಳನ್ನು ಹರಡಿಸಿದ ವಿಜಯನಗರದ ಒಂದನೆ ಸಂಗಮ ಮನೆತನ ತಮ್ಮೊಳಗೆ ಪಟ್ಟಕ್ಕೆ ಕಚ್ಚಾಡಿಕೊಂಡು ೧೪೮೫ರಲ್ಲಿ ನಶಿಸಿ ಹೋಯಿತು.

ಮೂಲತಃ ಕನ್ನಡ ಕರಾವಳಿಯ ಹೊನ್ನಾವರದ ಸಮೀಪದ ಸಾಲ್ಮಳ್ಳಿಯವನಾದ ಸಾಳ್ವ ನರಸಿಂಹನು ತೆಲುಗು ಪ್ರಭಾವಕ್ಕೆ ಒಳಗಾಗಿ ವಿಜಯನಗರದ ಅರಸರನ್ನು ಬದಿಗಿರಿಸಿ ರಾಜ್ಯದ ಹಿತ ದೃಷ್ಟಿಯಿಂದ ಸ್ವತಃ ಆಳಲಾರಂಭಿಸಿದ. ಆದರೆ ಈ ವಂಶದ ಅರಸರಲ್ಲೂ ಕಚ್ಚಾಟಕ್ಕೋಸ್ಕರ ನಡೆದ ಕದನ, ತುಮುಲ, ಒಳಸಂಚು ಮತ್ತು ಕ್ಷೋಭೆ ಕೊನೆಗೆ ಉತ್ಕೃಷ್ಟ ವ್ಯಕ್ತಿಯ ಉದಯದಲ್ಲಿ ಅಂತ್ಯವಾಯಿತು. ಈ ಉತ್ಕೃಷ್ಟ ವ್ಯಕ್ತಿಯೇ ತುಳು ವಂಶದ ಕೃಷ್ಣ ದೇವರಾಯ ಹಾಳು ಹಂಪೆಯ ಐತಿಹಾಸಿಕ ಸ್ಮಾರಕಗಳು ಕೃಷ್ಣ ದೇವರಾಯನ ಕ್ರಿಯಾತ್ಮಕ ಆಳ್ವಿಕೆಯನ್ನು ಪ್ರತಿ ಬಿಂಬಿಸುತ್ತವೆ. ಆಂತರಿಕ ಕಲಹಗಳಿಂದ ಸತ್ವಹೀನವಾಗಿದ್ದ ವಿಜಯ ನಗರ ರಾಜ್ಯವನ್ನು ಇವನು ಬಲಗೊಳಿಸಿದ ಚತುರ ಸೇನಾನಿಯಾದ ಕೃಷ್ಣ ದೇವರಾಯನು ತನ್ನ ಆಳ್ವಿಕೆಯ ಕಾಲದಲ್ಲಿ ಒರಿಯಾದ ಗಜಪತಿ, ಬಹಮನಿ ಸುಲ್ತಾನ ಬಿಜಾಪುರದ ಇಸ್ಮಾಯಿಲ್ ಆದಿಲ್ ಖಾನ್ ಇವರನ್ನೆಲ್ಲಾ ಯುದ್ಧದಲ್ಲಿ ಸೋಲಿಸಿ, ದಕ್ಷಿಣದಲ್ಲಿ ಬಂಡೆದ್ದ ಶ್ರೀರಂಗಪಟ್ಟಣ, ಶಿವನಸಮುದ್ರ ಪ್ರದೇಶಗಳ ಉಮತ್ತೂರು ಮತ್ತು ಕಳಸ - ಕಾರ್ಕಳ ಪಾಳೆಯಗಾರರನ್ನು ಬಗ್ಗು ಬಡೆದು ವಿಜಯನಗರದ ಕೀರ್ತಿಯನ್ನು ನಾಲ್ದೆಸೆಗಳಿಗೂ ಹಬ್ಬಿಸಿದನು. ಪಶ್ಚಿಮ ತೀರ ಪ್ರದೇಶದಲ್ಲಿ ವ್ಯಾಪಾರದಲ್ಲಿ ನಿರತರಾಗಿದ್ದ ಪೋರ್ಚುಗೀಸರ ಸ್ನೇಹ ಸಂಪಾದಿಸಿ ಸೇನಾಬಲವನ್ನು ವೃದ್ಧಿಸಿಕೊಂಡು ಪ್ರಬಲನಾಗಿದ್ದನು. ಪೋರ್ಚುಗೀಸ ಪ್ರವಾಸಿ 'ಡಾಯಸ್' ಕೃಷ್ಣ ದೇವರಾಯನ ಆ ಸ್ಥಾನವನ್ನು ಸಂದರ್ಶಿಸಿ ''ಈ ಅರಸನು ಅತ್ಯಂತ ಗೌರವಿತನಾದ ಹಾಗೂ ಪರಿಪೂರ್ಣ ದೊರೆ. ಮಹಾನ್ ಆಡಳಿತಗಾರ ಮತ್ತು ನ್ಯಾಯ ಪರವಾದವ''ನೆಂದು ಅಭಿಪ್ರಾಯ ಪಟ್ಟಿದ್ದಾನೆ.

ಇಪ್ಪತ್ತು ವರ್ಷಗಳ ಕಾಲ ಆಳಿದ ಕೃಷ್ಣ ದೇವರಾಯನ ನಂತರ ಆತನ ಮಲ ಸಹೋದರ ಅಚ್ಯುತ ದೇವರಾಯನು ಪಟ್ಟಕ್ಕೆ ಬಂದನು. ಸದಾಶಿವ ರಾಯನು ತುಳುವಂಶದ ಕೊನೆಯರಾಜ. ಆದರೆ ನಿಜವಾದ ಅಧಿಕಾರ ಅಳಿಯ ರಾಮರಾಯನದಾಗಿತ್ತು. ಕ್ರಿ.ಶ. ೧೫೬೫ರಲ್ಲಿ ನಡೆದ ರಕ್ಕಸತಂಗಡಿ ಕದನದಲ್ಲಿ ವಿಜಯನಗರಕ್ಕೆ, ರಾಮರಾಯನ ಅತಿಯಾದ ಆತ್ಮ ವಿಶ್ವಾಸ ಮತ್ತು ಅವನ ಸೇನೆಯಲ್ಲಿದ್ದ ಇಬ್ಬರು ಮುಸಲ್ಮಾನ ದಂಡನಾಯಕರ ವಂಚನೆಯಿಂದಾಗಿ ಹೇಳರಾದಷ್ಟು ಸೋಲಾಯಿತು. ಸಂಪದ್ಭರಿತ ವಿಜಯನಗರವನ್ನು ವೈರಿಗಳು ಸುಲಿದರು. ಅಲ್ಲಿನ ಕಲೆಗಳ ಸೌಂದರ್ಯವನ್ನು ಭಗ್ನಗೊಳಿಸಿ ಆ ನಗರವನ್ನು ಹಾಳುಹಂಪೆಯನ್ನಾಗಿ ಮಾಡಿದರು. ಈ ಘಟನೆಯ ನಂತರ ವಿಜಯ ನಗರದ ಅರಸರು ೧೬೩೬ರ ವರೆಗೆ ಆಳಿಕೊಂಡಿದ್ದರೂ ಅವರ ರಾಜ್ಯ ವಿಜಯನಗರವನ್ನು ಹೊರತು ಪಡಿಸಿದ ರಾಜ್ಯ ವಾಗಿತ್ತು.

**ಆಡಳಿತ ವ್ಯವಸ್ಥೆ:** ''ವಿಜಯ ನಗರವು ಮುಖ್ಯವಾಗಿ ಒಂದು ಸೇನಾ ರಾಜ್ಯ. ಅದರ ಆಡಳಿತ ವ್ಯವಸ್ಥೆ ಮುಸಲ್ಮಾನರ ವಿರುದ್ಧ ಯಶಸ್ವೀ ಪ್ರತಿಭಟನೆ ನೀಡುವ ತನ್ನ ಉದ್ದೇಶಕ್ಕನುಗುಣವಾಗಿ ಸಂಘಟಿತವಾಗಿತ್ತು'' ಎಂದು ಡಾ. ಪಣಿಕ್ಕರರು ಹೇಳಿದ್ದಾರೆ. ಹಿಂದೂ ರಾಜತ್ವದ ಕಲ್ಪನೆಯನ್ನು ಚೆನ್ನಾಗಿ ಮನವರಿಕೆ ಮಾಡಿಕೊಂಡು ವಿಜಯನಗರದ ಅರಸರು

ಅದರಂತೆ ರಾಜ್ಯಭಾರ ಮಾಡುತ್ತಿದ್ದವರು. ರಾಜನು ಆಡಳಿತವನ್ನು ಮಂತ್ರಿಗಳ ನೆರವಿನಿಂದ ಸಾಗಿಸುತ್ತಿದ್ದು ಮುಖ್ಯಮಂತ್ರಿಗೆ ಮಹಾ ಪ್ರಧಾನ ಅಥವಾ ಶಿರ ಪ್ರಧಾನ ಎಂಬ ಹೆಸರಿತ್ತು. ಮುಘಲ್ ಸಾಮ್ರಾಜ್ಯ ದಂತೆ ಇಲ್ಲಿ ಆಡಳಿತ ಅಧಿಕಾರಿಗಳು ಸೇನಾಧಿ ಕಾರಿಗಳೂ ಆಗಿದ್ದರು.

ಭೂಕಂದಾಯ ರಾಜಾದಾಯದ ಪ್ರಧಾನ ಭಾಗ ವಾಮನ ಮುದ್ರೆಯ ಕಲ್ಲುಗಳನ್ನು ಹಾಕಿ ಭೂಮಿಯ ಗಡಿಗುರುತಿಸುತ್ತಿದ್ದರು. ಸಾಮ್ರಾಜ್ಯದಲ್ಲಿ ಗದ್ಯಾಣ, ಹೊನ್ನು ಅಥವಾ ವರಾಹ ಎಂಬ ಹೆಸರಿನ ಸುಮಾರು ೫೨ ಗ್ರೇನ್ ತೂಕದ ಬಂಗಾರದ ನಾಣ್ಯವಿತ್ತು ಪ್ರತಾಪ ಎಂಬುದು ಅರ್ಧಗದ್ಯಾಣ ಹಣ (ಪಣ) ಗದ್ಯಾಣದ ದಶಾಂಶ ತೂಕದ ನಾಣ್ಯ. ಹಾಗ, ವೀಸ, ಕಾಸು ಮುಂತಾದ ಚಿಲ್ಲರೆ ನಾಣ್ಯಗಳೂ ಇದ್ದವು.

ಧರ್ಮ : ಹಿಂದೂ ಧರ್ಮದ ಸಹಿಷ್ಣು ನೀತಿಗನುಗುಣವಾಗಿ ವಿಜಯ ನಗರದ ಅರಸರು ಸಕಲ ಸಂಪ್ರದಾಯಗಳಿಗೂ ಪ್ರೋತ್ಸಾಹ ಬೆಂಬಲ ನೀಡಿದರು. ವಚನಗಳ ಸಂಪಾದನೆ ಸಂಕಲನ ಬೃಹತ್ ಪ್ರಮಾಣದಲ್ಲಿ ಆಯಿತು. ದಾಸ ಸಾಹಿತ್ಯದ ಬೆಳವಣಿಗೆ ಸಾಮ್ರಾಜ್ಯದ ಕಾಲದಲ್ಲೇ ಆದುದು. ಪಶ್ಚಿಮ ಕರಾವಳಿಯಲ್ಲಿ ಜೈನರು ಪ್ರಬಲಿಸಿದರು.

ಸಾಹಿತ್ಯ : ದಕ್ಷಿಣ ಭಾರತದ ಪ್ರತಿಯೊಂದು ಭಾಷೆಯಲ್ಲೂ ಸಾಹಿತ್ಯ ಚಟುವಟಿಕೆಗೆ ವಿಜಯನಗರ ಪ್ರೋತ್ಸಾಹ ನೀಡಿತು. ಸಂಸ್ಕೃತದಲ್ಲಿ ಗಣ್ಯ ಕೃತಿಗಳ ರಚನೆ ಈ ಕಾಲದಲ್ಲಿ ಆಯಿತು. ಶ್ರೇಷ್ಠ ಕನ್ನಡ ಕವಿಗಳಾದ ಕುಮಾರವ್ಯಾಸ, ಚಾಮರಸ ರತ್ನಾಕರ ವರ್ಣಿಗಳು ಇದೇ ಕಾಲದಲ್ಲಿ ಇದ್ದವರು. ತಿಮ್ಮಣ್ಣನು ಕೃಷ್ಣದೇವರಾಯನಿಂದ ಆಶ್ರಿತನಾದ ಕವಿಯಾಗಿದ್ದು ಕುಮಾರ ವ್ಯಾಸನು ಬರೆದ ದಶಪರ್ವ ಭಾರತವನ್ನು ಪೂರ್ತಿ ಮಾಡಿದನು. ಈ ಕಾಲದಲ್ಲಿದ್ದ ನಂಜುಂಡ, ಭೀಮ ಕವಿ, ಸಾಳ್ವ, ಲಕ್ಕಣ ದಂಡೇಶ ಮುಂತಾದವರು ಗಣ್ಯ ಕನ್ನಡ ಕವಿಗಳು. ದಾಸರಾದ ಶ್ರೀಪಾದ ರಾಯ, ವ್ಯಾಸ ತೀರ್ಥ, ಪುರಂದರ, ಕನಕ, ವಾದಿರಾಜರೂ ವಿಜಯ ನಗರದ ಕಾಲದಲ್ಲಿಯೇ ತಮ್ಮ ಕೀರ್ತನೆಗಳನ್ನು ಹಾಡಿದರು. ತೋಂಟದ ಸಿದ್ದ ಲಿಂಗಯತಿ, ಗುಮ್ಮಳಾಪುರದ ಸಿದ್ದಲಿಂಗಯತಿ, ಗೂಳೂರು ಸಿದ್ಧವೀರಗೋಡೆಯ ವಚನ ಸಾಹಿತ್ಯಕ್ಕೆ ಅಪೂರ್ವ ಸೇವೆ ಸಲ್ಲಿಸಿದರು. ತೆಲುಗು ಸಾಹಿತ್ಯಕ್ಕೆ ವಿಜಯನಗರ ಸುವರ್ಣಯುಗ ಕೃಷ್ಣ ದೇವರಾಯನು ಸ್ವತಃ 'ಆಮುಕ್ತ ಮೌಲ್ಯದ'ವನ್ನು ಬರೆದನಲ್ಲದೆ ಅಷ್ಟ ದಿಗ್ಗಜರೆಂದು ಖ್ಯಾತರಾದ ತೆಲುಗು ಕವಿಗಳಿಗೆ ಆಶ್ರಯ ನೀಡಿದನು. ಅಲ್ಲಸಾನಿ ಪೆದ್ದನ, ನಂದಿ ತಿಮ್ಮಣ್ಣ, ತೆನಾಲಿ ರಾಮಕೃಷ್ಣ, ಕುಮಾರ ಧೂರ್ಜಟಿ ಮುಂತಾದವರು ಇದರಲ್ಲಿ ಸೇರಿದ್ದರು.

ಕಲೆ ಮತ್ತು ವಾಸ್ತು ಶಿಲ್ಪ : ದ್ರಾವಿಡ ಶೈಲಿಯ ಶ್ರೇಷ್ಠ ವಿಕಸಿತ ಸ್ವರೂಪ ಎಂಬುದಾಗಿ ಪರ್ಸಿ ಬ್ರೌನ ವಿಜಯನಗರದ ವಾಸ್ತು ಶೈಲಿಯನ್ನು ಕರೆದಿದ್ದಾರೆ. ವಿಜಯ ನಗರದ ಶಿಲ್ಪಿಗಳು ತಮ್ಮ ರಚನೆಗಳ ಶಕ್ತಿ ತಾಳಿಕೆಗಳನ್ನು ಹೆಚ್ಚಿಸಲು ಬಿರುಸಾದ ಬೆಣಚುಕಲ್ಲು (ಗ್ರಾನೈಟ್)ಗಳನ್ನೇ ಬಳಸಿದರು. ಪರಕೀಯರ ಆಕ್ರಮಣವನ್ನು ಎದುರಿಸಲು ಸ್ಥಾಪಿತವಾದ ಈ ಸಾಮ್ರಾಜ್ಯವು ತನ್ನ ದೃಢೋದ್ದೇಶಕ್ಕನುಗುಣವಾಗಿಯೋ ಎಂಬಂತೆ ಮತ್ತೊಮ್ಮೆ ಈ ಬಿರುಸು ಮಾಧ್ಯಮವನ್ನೇ ಬಳಸಲಾರಂಭಿಸಿತು. ತನ್ನ ಘನತೆ ವೈಭವಗಳಿಗನುಗುಣವಾಗಿ ಸಾಮ್ರಾಜ್ಯವು ಬೃಹದಾಕಾರದ ರಚನೆಗಳನ್ನೇ ಮಾಡಿತು.

ವಿಜಯ ನಗರದ ಕೆಲವು ಲೌಕಿಕ ರಚನೆಗಳು ಇಟ್ಟಿಗೆ, ಗಾರೆಯದಾಗಿದ್ದು ಮುಸ್ಲಿಂ ಶೈಲಿಯಿಂದ ಪ್ರಭಾವಿತವಾಗಿವೆ. ಹಂಪೆಯ ಕಮಲಮಹಲ್, ಗಜಶಾಲೆ, ರಾಣಿಯರ ಸ್ನಾನಾಗಾರಗಳು ಉದಾಹರಣೆಯಾಗಿವೆ.

ವಿಜಯನಗರದ ಕಾಲದಲ್ಲಿ ಚಿತ್ರಕಲೆಯ ಕ್ಷೇತ್ರದಲ್ಲಿ ಗಣ್ಯ ಸಾಧನೆಯಾಯಿತು. ಯೂರೋಪಿನಲ್ಲಿ ನವೋದಯ (ರಿನೇಸಾನ್ಸ್) ನಡೆಯುತ್ತಿದ್ದ ಕಾಲದಲ್ಲಿಯೇ ಭಾರತದಲ್ಲಿ ಚಿತ್ರಿತವಾದ ಈ ಕಲಾಕೃತಿಗಳು ನೈಜತೆಗೆ ನಿಕಟವಾಗಿದ್ದುದನ್ನು ಗಮನಿಸಬಹುದು. ಸಂಗೀತ, ನೃತ್ಯ, ನಾಟಕಗಳ ಕ್ಷೇತ್ರಗಳಲ್ಲೂ ಈ ಕಾಲ ಗಣ್ಯ ಸಾಧನೆಯ ಅವಧಿ, ವಿದ್ಯಾರಣ್ಯರ 'ಸಂಗೀತ ಸಾರ', ಕಲ್ಲಿನಾಥ್ಯ 'ಸಂಗೀತ ಕಲಾ ನಿಧಿ', ರಾಮಾ ಮಾತ್ಯನ 'ಸ್ವರ ಮೇಳಕಲಾನಿಧಿ ' ಮುಂತಾದ ಸಂಸ್ಕೃತ ಕೃತಿಗಳೂ, ಪುರಂದರದಾಸರ ಕೀರ್ತನೆಗಳೂ, ನಿಜಗುಣ ಶಿವಯೋಗಿಗಳ 'ವಿವೇಕ ಚಿಂತಾಮಣಿ' ಯಲ್ಲಿನ ಸಂಗೀತದ ಬಗೆಗಿನ ಅಧ್ಯಾಯವೂ ಸಂಗೀತದ ಕ್ಷೇತ್ರದಲ್ಲಿ ಆದ ಸಾಧನೆಗೆ ಸಾಕ್ಷಿ. ವಿಜಯನಗರ ಕಾಲದಲ್ಲಿ ನರ್ತನ ಅತ್ಯಂತ ಜನಪ್ರಿಯ ಕಲೆ, ರಾಣಿಯರಿಗೂ ನರ್ತನ ಕಲಿಸಲಾಗುತ್ತಿತ್ತೆಂದು ಪ್ರವಾಸಿಗರು ತಿಳಿಸಿದ್ದಾರೆ. ಕೃಷ್ಣದೇವರಾಯನು ಬರೆದ 'ಜಾಂಬವತಿ ಕಲ್ಯಾಣ' ಸಂಸ್ಕೃತ ನಾಟಕವನ್ನು ನಟಿಸಲಾಗಿತ್ತಂತೆ. ಯಕ್ಷಗಾನ ಕೃತಿಗಳೂ ಈ ಕಾಲದಲ್ಲಿ ರಚಿವಾಗಿದೆ.

ದಕ್ಷಿಣ ಭಾರತದ ಇತಿಹಾಸದಲ್ಲಿ ಒಂದು ಭವ್ಯ ಅಧ್ಯಾಯ ವಿಜಯನಗರ ಹಂಪೆಯ ಅವಶೇಷಗಳು ಉಧ್ವಸ್ತ ಸ್ಥಿತಿಯಲ್ಲೂ ಆ ಪ್ರಾಚೀನ ಸಾಮ್ರಾಜ್ಯದ ವೈಭವದ ಪರಿಚಯವನ್ನು ನಮಗೆ ನೀಡುತ್ತವೆ. ಐರೋಪ್ಯ ಪ್ರವಾಸಿಕರು ರೋಂ ನಗರಕ್ಕೆ ಈ ರಾಜಧಾನಿಯನ್ನು ಹೋಲಿಸಿದ್ದಾರೆ. ಸಮಕಾಲೀನ ವಿಶ್ವದ ಅತ್ಯಂತ ಜನಭರಿತ ನಗರಗಳಲ್ಲಿ ಅದು ಒಂದಾಗಿತ್ತು. ''ಈ ಬೃಹತ್ ಜಗತಿಗಳು ತಮ್ಮ ಅಪರಭಾಗಗಳಲ್ಲಿ ಉದ್ವಸ್ತವಾಗಿದ್ದರೂ ಪ್ರಭಾವಶಾಲೀ ವಾಸ್ತುಗಳಾಗಿದ್ದು ಇವುಗಳಂತೆ ಮರೆತ

**ರಾಮನವಮಿ ಕಾರ್ಯಕ್ರಮ**

ಇದೇ ಬರುವ ಎಪ್ರಿಲ್ ತಿಂಗಳ 2ನೇ ತಾರೀಕು ಸೋಮವಾರದಂದು ಸಂಜೆ 7-00 ಗಂಟೆ ರಾಮನವಮಿ ಪ್ರಯುಕ್ತ ಅಸೋಸಿಯೇಷನ್ನಿನ ಮಹಿಳಾ ಸದಸ್ಯರಿಂದ ಭಕ್ತಿಗೀತೆಗಳ ಒಂದು ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ನಂತರ ಪೂಜೆ, ಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ ಎಲ್ಲರಿಗೂ ಆದರದ ಸ್ವಾಗತ.

**FOR ALL YOUR DOMESTIC AND INTERNATIONAL TRAVEL ARRANGEMENTS**

*CONTACT*

**AUGUST TRAVEL SERVICE**

Agents For
INDIAN AIRLINES &
JET AIRLINES

**REGD. OFFICE :**
3/15, ASHIANA, SECTOR 17,
VASHI, NAVI MUMBAI
PHONES : 789 1970 * 789 1972
789 2451
GRAMS : AUGTRASERV

**ALSO AT :**
2/16, KABBUR HOUSE,
SION (E), MUMBAI-400 022.
PHONES : 407 2984 * 409 3573
407 7750

ಸಾಮ್ರಾಜ್ಯದ ಕತೆಯನ್ನು ಸಜೀವವಾಗಿ ಛಾಪಿಸುವ ನಗರದ 'ಇನ್ಯಾವ ಅವಶೇಷಗಳೂ ಇಲ್ಲ' ಎಂದು ಬ್ರೌನ್ ಅವರು ಅರಮನೆಯ ನೆಲಗಟ್ಟುಗಳನ್ನು ಉಲ್ಲೇಖಿಸಿ ಹೇಳುತ್ತಾರೆ. ಪ್ರವಾಸಿಗರು ಸಾಮ್ರಾಜ್ಯದ ಬಗ್ಗೆ ನೀಡಿದ ವರ್ಣನೆಯನ್ನು ಓದಿದಾಗ ಅದು "ಮರೆಯಲಾಗದ ಸಾಮ್ರಾಜ್ಯ" ವಾಗಿತ್ತೆಂಬ ಬಗ್ಗೆ ಸಂದೇಹವೇ ಇಲ್ಲವೆಂದು ಅನಿಸದೆ ಇರದು.

ವಾಸ್ತು ಶಿಲ್ಪದ ಭವ್ಯತೆಗೆ ಮತ್ತು ಮಹತ್ತಿಗೆ ಅನುಗುಣವಾದ ಶಿಲ್ಪಗಳನ್ನು ವಿಜಯನಗರ ಶಿಲ್ಪಿಗಳು ನಿರ್ಮಿಸಿದರು. ಸತ್ವಪೂರ್ಣ ಭಾವ ತೋರಿಸುವಲ್ಲಿ ವಿಜಯನಗರ ಶಿಲ್ಪಿಗಳಿಗೆ ಸರಿಸಮಾನರು ಯಾರೂ ಇಲ್ಲ ಎನ್ನಬಹುದು. ಹಂಪೆಯ ಗಣೇಶ, ಕಾರ್ಕಳದ ಗೊಮ್ಮಟ ಮತ್ತು ವಿವಿಧ ದೇವಾಲಯಗಳಲ್ಲಿ ಕೆತ್ತಿಸಿದ ವಿಗ್ರಹಗಳು ವಿಜಯ ನಗರ ಕಾಲದ ಶಿಲ್ಪಿಗಳ ಕಲಾಕೌಶಲ್ಯದ ಪ್ರತೀಕಗಳು. ಹಂಪೆಯ ವಿರೂಪಾಕ್ಷ ದೇವಾಲಯದ ಕಲ್ಯಾಣ ಮಂಟಪದ ಚಿತ್ರಕಲೆ ಮತ್ತು ಲೇಪಾಕ್ಷಿ ದೇವಾಲಯಗಳಲ್ಲಿ ಇರುವ ವರ್ಣಚಿತ್ರಗಳು ವಿಜಯ ನಗರ ಚಿತ್ರನಗರ ಚಿತ್ರಕಲೆಯ ಸಾಧನೆಗೆ ಸಾಕ್ಷಿಗಳು.

ಒಟ್ಟಿನಲ್ಲಿ ವಿಜಯನಗರ ಸಾಮ್ರಾಜ್ಯವು ಇತಿಹಾಸ ವಿದ್ಯಾರ್ಥಿಗಳಿಗೆ ಹಲವಾರು ಪಾಠಗಳನ್ನು ಕಲಿಸಿ, ಕಲೆ, ಸಂಸ್ಕೃತಿಗಳನ್ನು ರಕ್ಷಿಸಿ ಪೋಷಿಸಿ, ತನ್ನ ಭವ್ಯತೆ ಶ್ರೀಮಂತಿಕೆಗಳಿಂದ, ದೇಶ, ವಿದೇಶಗಳಿಂದ ಬಂದ ಜನರನ್ನು ದಂಗುಗೊಳಿಸಿ ಮರೆಯಲಾಗದ ಸಾಮ್ರಾಜ್ಯವಾಗಿ ಮೆರೆಯಿತು.

ತುಂಗ ಭದ್ರೆಯ ವರೆಗಿನ ಇಡಿಯ ದಕ್ಷಿಣವನ್ನು ಆಳಿದ ಸಂಗಮ, ಸಾಳವ, ತುಳವ ಹಾಗೂ ಅರವೀಡು ಈ ನಾಲ್ಕು ವಂಶದ ಅರಸರಲ್ಲಿ ಬುಕ್ಕರಾಯ, ಪ್ರೌಢದೇವರಾಯ, ಕೃಷ್ಣದೇವರಾಯ ಮತ್ತು ರಾಮರಾಯರೇ, ಅತ್ಯಂತ ಪ್ರಸಿದ್ಧರು. ಅವರಲ್ಲಿ ವಿಶೇಷವಾಗಿ, ಕೃಷ್ಣ ದೇವರಾಯನು ಶೂರನೂ, ಉದಾರಿಯೂ ಮುತ್ಸದ್ದಿಯೂ ಆದ ಚಕ್ರವರ್ತಿಯಾಗಿದ್ದನು. ಇಡಿಯ ಸಾಮ್ರಾಜ್ಯವೇ ಅದರ ಅದ್ಭುತರಾಜಧಾನಿ, ಅಗಣಿತವಾದ ಸಂಪತ್ತು, ವ್ಯಾಪಾರ, ಸೈನಿಕ, ಸಾಮರ್ಥ್ಯಗಳಿಗಾಗಿ ಜಗತ್ತಿನಲ್ಲೆಲ್ಲಾ ಪ್ರಸಿದ್ಧಿ ಪಡೆಯಿತು. ಕ್ರಿ.ಶ. ೧೫೬೫ರಲ್ಲಿ ರಕ್ಕಸತಂಗಡಿ ಅಥವಾ ತಾಳೀಕೋಟೆಯಲ್ಲಿ ಆದ ಕಾಳಗದ ಪರಿಣಾಮವಾಗಿ ಕುಸಿದು ಬಿದ್ದರೂ ಅರವೀಡು ವಂಶದ ಅರಸರು ಮುಂದೆ ಒಂದು ಶತಮಾನದ ಸುಮಾರಿನವರೆಗೂ ವಿಜಯ ನಗರದ ಉಜ್ವಲ ಪರಂಪರೆಯನ್ನು ಕಾಯ್ದುಕೊಂಡು ಬಂದರು.

# ಚಿತ್ತಾಲರ ಬದುಕು ಬರಹ

ಮೇಧಾ ಎಮ್. ಕುಲಕರ್ಣಿ

ಆಧುನಿಕ ಕನ್ನಡ ಸಾಹಿತ್ಯದಲ್ಲಿ 'ಸಣ್ಣಕಥೆ' ಎಂಬ ಸಾಹಿತ್ಯ ಪ್ರಕಾರದ ಬೀಜವನ್ನು ಬಿತ್ತಿದರು, ಶ್ರೀ ಪಂಜೆಯವರಾದರೆ, ಸಮೃದ್ಧವಾದ ಫಲವನ್ನು ತೆಗೆದವರು ಶ್ರೀ ಮಾಸ್ತಿ ಅವರು. ಆದರೆ ಚಿತ್ತಾಲರು ಈ ಸಾಹಿತ್ಯದಲ್ಲಿ ವೈವಿಧ್ಯತೆಯುಳ್ಳ ವಿಶಿಷ್ಟ ಫಲಗಳನ್ನೇ ಬೆಳೆದಿದ್ದಾರೆ.

ಚಿತ್ತಾಲರು ಉತ್ತರ ಕನ್ನಡ ಜಿಲ್ಲೆಯ ಹನೇಹಳ್ಳಿಯವರು. ತಂದೆ ವಿಠೋಬಾ, ತಾಯಿ ರುಕ್ಮಿಣಿ. ಖ್ಯಾತ ಕವಿ ಗಂಗಾಧರ ಚಿತ್ತಾಲರು ಇವರ ಸಹೋದರರು. ಇವರು ಮುಂಬಯಿ ವಿಶ್ವವಿದ್ಯಾಯಲಯದ ತಾಂತ್ರಿಕ ಶಿಕ್ಷಣದ ಪದವೀಧರರು ಲೇಖಕರು ಕಾರವಾರದ ಬಾಡ ಎಂಬ ಹಳ್ಳಿಯ ನ್ಯೂ ಇಂಗ್ಲೀಷ ಸ್ಕೂಲಿನಲ್ಲಿ ಎರಡು ತಿಂಗಳು ಮಾಸ್ತರರಾಗಿಯೂ ಕೆಲಸ ಮಾಡಿದ್ದಾರೆ.

ಹುಟ್ಟೂರು ಇವರಿಗೆ ಬರಿ ನೆಲದ ಹೆಸರಾಗಿರದೆ, ಸಾಹಿತ್ಯದ ಹುಟ್ಟಿಗೆ ಕಾರಣವಾಗಿ, ಚೈತನ್ಯದ ನಿರಂತರ ಪ್ರೇರಕ ಶಕ್ತಿಯೂ ಆಗಿದೆ. ಹುಟ್ಟೂರು, ಮಾತೃ ಪ್ರಜ್ಞೆ, ಅಪ್ಪನ ಜೊತೆಗಿನ ಸಂಬಂಧ ಇವರ ಸಾಹಿತ್ಯ ಸೃಷ್ಟಿಗೆ ಚೇತೋಹಾರಿಯಾಗಿವೆ.

ಚಿತ್ತಾಲರು ಒಂದು ದಿನ ವಿರಮಿಸಿದ್ದಾಗ ಗಿಡದಲ್ಲಿ ಅವಿತುಕೊಂಡು ಒಂಟಿಯಾಗಿ ಕೂಗುತ್ತಿದ್ದ ಕಾಗೆಯ ಕೂಗು ಕೇಳಿಸಿತು. ಆ ಕೂಗಿನಿಂದ ಅಮ್ಮನ ಧ್ವನಿಯ ನೆನಪು ಮರುಕಳಿಸತೊಡಗಿತು. ಹೀಗೆ ಕಾಗೆಯ ಕೂಗಿನಿಂದ ಅಮ್ಮನ ಧ್ವನಿಯನ್ನು ಕಲ್ಪಿಸಿ ಕಥೆ ಬರೆಯತೊಡಗಿದರು. "ಬೊಮ್ಮಿಯ ಹುಲ್ಲು ಹೊರೆ" ಮೊದಲ ಕಥೆಯಾಗಿ ಹುಟ್ಟಿ ಬಂದಿತು. ಹೀಗೆ (೧೯೪೯) ಮಧ್ಯಾಹ್ನ ಯಾವ ಸೂಚನೆ ಇಲ್ಲದೇ ಕಥೆಗಾರನಾಗಿ ಬಿಟ್ಟೆ ಎಂದು ಇವರೇ ಹೇಳಿದ್ದಾರೆ.

ಬೆಳಿಗ್ಗೆ ೪.೩೦ಕ್ಕೆ ಬರೆಯುವುದು ಇವರ ಹವ್ಯಾಸ. ಬೆಳಗಿನ ವೇಳೆಯಲ್ಲಿ ಮನಸ್ಸು ನಿರ್ಮಲವಾಗಿರುವುದು, ಸುತ್ತಲೂ ಕತ್ತಲಾವರಿಸಿದ ವೇಳೆಯಲ್ಲಿ ಕಲ್ಪನೆಗಳು ಅವ್ಯಾಹತವಾಗಿ ಕೃತಿಯನ್ನು ಮುಂದುವರಿಸಿಕೊಂಡು ಹೋಗುತ್ತಿರುತ್ತವೆ. ಅದೇ ಬೆಳಗು ಮೂಡಿತೆಂದರೆ ಮನದಲಿ ಮೂಡುವ ಪ್ರತಿಮೆಗಳು ಮಂಕಾಗತೊಡಗುತ್ತವೆ. ಆದ್ದರಿಂದ ಹಗಲಿನಲ್ಲಿ ಹೊಸತನ್ನು ಸೃಷ್ಟಿಸುವ ಕೆಲಸ ತಮ್ಮಿಂದಾಗದು ಎಂಬುದು ಇವರ ಅಭಿಪ್ರಾಯ.

ಪ್ರಾರಂಭದಲ್ಲಿ 'ಸಚೇತನ' ವಾರ ಪತ್ರಿಕೆಯಲ್ಲಿ ಚಿತ್ತಾಲರ ಕಥೆಗಳು ಪ್ರಕಟವಾದುವು. ನಂತರ ಮಾಸ್ತಿ ಅವರ ಜೀವನ ಪತ್ರಿಕೆಯಲ್ಲಿ ದಿನಕರ ದೇಸಾಯಿಯವರ 'ಜನ ಸೇವಕದಲ್ಲಿ' 'ನನ್ನ ಜಿಲ್ಲೆಯ ಜೀವನ ಚರಿತ್ರೆಗಳು' ಮಾಲಿಕೆಯಾಗಿ ಪ್ರಕಟವಾದವು. 'ಸಂದರ್ಶನ' ಮೊದಲ ಕಥಾ ಸಂಕಲನದ ಪ್ರಕಟಣೆಗೆ ದಿನಕರ ಕಾದಂಬರಿ ಮೂರು ದಾರಿಗಳು' (೧೯೬೪) ನಂತರ 'ಆಟ' ಸಂಕಲನ (೧೯೬೯) ಬಿಡುಗಡೆ ಯಾದವು.

ಚಿತ್ತಾಲರು ಮೊದಮೊದಲಲ್ಲಿ ಮಾಸ್ತಿ, ಕಾರಂತ ಕುವೆಂಪು ಅವರ ಪ್ರಭಾವಕ್ಕೊಳಗಾಗಿದ್ದರೂ ನಂತರ ಪಾಶ್ಚಾತ್ಯ ಕಥೆ, ಕಾದಂಬರಿಕಾರರ ಪ್ರಭಾವಕ್ಕೊಳಗಾಗಿದ್ದಾರೆ. 'ಅಪರಿಚಿತ' ಕಥೆ ಕಾಫ್ಕಾ ಲೇಖಕರ ಪ್ರಭಾವಕ್ಕೊಳಗಾಗಿದೆ. ಕಾಫ್ಕಾ ಬರೆದ 'ಜಜ್‌ಮೆಂಟ' ಕಥೆ ಅಪ್ಪ - ಮಗನ ಸಂಬಂಧವನ್ನು ಕುರಿತಂಥದ್ದು. ಕಾಫ್ಕಾ - ಅಪ್ಪರ ಸಂಬಂಧ, ಲೇಖಕರು ಬಾಲ್ಯದಲ್ಲಿ ಅನುಭವಿಸಿದ ಅಪ್ಪನ ಸಂಬಂಧ ಇಬ್ಬರದೂ ಒಂದೇ ತರಹದ್ದಾಗಿದ್ದುದರಿಂದ ಕಾಫ್ಕಾನ ಕಥೆ 'ಜಜ್‌ಮೆಂಟ'ದಷ್ಟು ಬಲವಾದ ಪರಿಣಾಮ ಮಾಡಿದ ಕಥೆ ಬೇರೊಂದಿಲ್ಲ. ಕಾಫ್ಕಾ ಎಂದರೆ ಜಜ್‌ಮೆಂಟ 'ಜಜ್‌ಮೆಂಟ'ಎಂದರೆ ಅಪ್ಪ - ಮಗನ ಸಂಬಂಧ ಎನ್ನುವ ಸಮೀಕರಣಕ್ಕೆ ಎಡೆಮಾಡಿಕೊಟ್ಟಷ್ಟು ಪರಿಣಾಮ ಬೀರಿದೆ ಎಂದು ಲೇಖಕರೇ ಹೇಳಿಕೊಂಡಿದ್ದಾರೆ.

ವೃತ್ತ ಪತ್ರಿಕೆಯ ಸುದ್ದಿಗಳು, ಭುಟ್ಟೋನ ಫಾಸಿ, ಆಸ್ಸಾಮದಲ್ಲಿಯ ಹತ್ಯಾಕಾಂಡ, ಝೋಪಡ ಪಟ್ಟಿಗಳ ಉಚ್ಚಾಟನೆ ಇಂತಹುಗಳಿಂದ ವಿಹ್ವಲಗೊಂಡು ಕತೆಯ ಸೃಷ್ಟಿಗೆ ಇವು ಪ್ರತಿಮೆಗಳನ್ನು, ಸನ್ನಿವೇಶಗಳನ್ನು ಒದಗಿಸಿದೆ ಎಂದು ಇವರೇ ಹೇಳಿದ್ದಾರೆ.

'ಆಟ' ಕಥಾ ಸಂಕಲನವು ಇವರ ಸಾಹಿತ್ಯಕ್ಕೆ ಹೊಸ ತಿರುವು ಕೊಟ್ಟಿದೆ. ಈ ಕಥಾ ಸಂಕಲನ ಸಾಹಿತಿಗೆ ಅತ್ಯಂತ ಪ್ರಿಯವಾದ ಕತೆಯಾಗಿದೆ.

ಸಾವು ಅಪರಿಹಾರ್ಯವಾದ ಹುಟ್ಟಿನೊಂದಿಗೇ ಬೆನ್ನಟ್ಟಿ ಬರುವ ಭೂತ. ಅನಪೇಕ್ಷಿತವಾದರೂ ಅನಿವಾರ್ಯ. ಸಾವು ಮನುಷ್ಯನನ್ನು ಆಕಸ್ಮಿಕವಾಗಿ ಅಥವಾ ಅನಿರೀಕ್ಷಿತವಾಗಿ ಆಕ್ರಮಿಸಬಹುದು. ಆಟ, ಅದೃಷ್ಟ, ಪಯಣಗಳಲ್ಲಿ ಲೇಖಕರು ಹಲವು ಬಗೆಗಳಲ್ಲಿ ಸಾವಿನ ಪ್ರಶ್ನೆಯನ್ನು ಚಿತ್ರಿಸಿದ್ದಾರೆ. ಹುಟ್ಟು ಸಾವುಗಳ ನಡುವಿನ ಬೂದು ಬಣ್ಣದ. ಬೆಳಕು ನಮ್ಮ ಅನುಭವದಲ್ಲಿ ಬರುವ ನಿಘೂಡ ಬೆರಗು, ಸಾವನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿ, ಬದುಕನ್ನು ಸಂತೋಷದಿಂದ ಸ್ವೀಕರಿಸುವ ಪ್ರಜ್ಞೆ ಆರೋಗ್ಯಕರ ಎಂಬುದು ಚಿತ್ತಾಲರ ಅಭಿಪ್ರಾಯ.

'ಆಟದ ನಂತರ 'ಕತೆಯಾದಳು ಹುಡುಗಿ', 'ಶಿಕಾರಿ' ಇವುಗಳು ಆಟದ ಕತೆಗಳಿಗಿಂತ ಭಿನ್ನವಾದವುಗಳಾಗಿವೆ. ಅಸಮಗ್ರತೆಯಿಂದ ಸಮಗ್ರತೆಯ ಕಡೆಗೆ, ಅಪ್ರಭುದ್ಧತೆಯಿಂದ ಪ್ರಭುದ್ಧತೆಯ ಕಡೆಗೆ ಮನುಷ್ಯರಾಗಿ ಮಾಡುವ ಪ್ರಕ್ರಿಯೆಗೆ 'ಶಿಕಾರಿ' ರೂಪಿತವಾಗಿದೆ' ಎನ್ನುವುದು 'ಶಿಕಾರಿ'ಯ ಬಗ್ಗೆ ಲೇಖಕರ ಹೇಳಿಕೆ.

ಮನುಷ್ಯನಲ್ಲಿಯ ಮನುಷ್ಯತ್ವವನ್ನು ಮನುಷ್ಯನಾಗಿ ನೋಡಲು ಪ್ರಯತ್ನಪಟ್ಟಿದ್ದಾರೆ. ಸಣ್ಣ ಕತೆಯ ವ್ಯಾಪ್ತಿಯನ್ನು ಹೆಚ್ಚಿಸಿ ಅದಕ್ಕೊಂದು ಸಮಗ್ರತೆ ತಂದುಕೊಟ್ಟ ಕೀರ್ತಿಗೆ ಚಿತ್ತಾಲರು ಪಾತ್ರರಾಗಿದ್ದಾರೆ. ಇವರ ಓದು, ಅನುಭವ ಕೇವಲ ವಿಶ್ವವಿದ್ಯಾಲಯದ ಚೌಕಟ್ಟಿಗೆ ಸೀಮಿತವಾಗಿರದೆ ಬದುಕಿನ ವಿಚಾರಗಳನ್ನು ಹಲವಾರು ರೀತಿಗಳಲ್ಲಿ ಕಾಣುವ ಉತ್ಸುಕರಾಗಿದ್ದುದರಿಂದ ಬರವಣಿಗೆಯ ಹಿಂದೆ ಸಮಗ್ರ ಜೀವನ ಸೃಷ್ಟಿಯಾಗಿದೆ. ಅಂತಃ ಕರಣವನ್ನು ತಟ್ಟಿ ಎಬ್ಬಿಸುವ ಮಾನವೀಯತೆ ಇದೆ. ಬಾಳಿನ ಉದ್ದಕ್ಕೂ ಬಿಡಿಸಿಕೊಳ್ಳಲು ಆಗದಿದ್ದ, ವಿಧಿಯಂತೆ ಬೆನ್ನು ಹತ್ತಿದ ಒಂದು ಭಾವನೆ, ನನ್ನ ನಿರ್ದೋಷವನ್ನು ಸಿದ್ಧ ಪಡಿಸಿ ತೋರಿಸಬೇಕೆನ್ನುವ ಅವಶ್ಯಕತೆ, ಬಾಲ್ಯದಲ್ಲಿ ಅಪ್ಪನ ಸಂಬಂಧದಲ್ಲಿ ಬೇರು ಬಿಟ್ಟಿದ್ದ ಊಹೆ, ಜೀವನದಲ್ಲಿಯ ಮುಖಾ-ಮುಖಿ ಸನ್ನಿವೇಶಗಳು ಲೇಖಕರಿಗೆ ಕತೆಗಾರನಾಗಲು ಕಾರಣವಾಗಿವೆ.

''ಸೃಜನಶೀಲತೆ ಸಾಹಿತ್ಯ ಮತ್ತು ನಾನು' ಲೇಖನ ಸಂಗ್ರಹವು ಇವರ ಜ್ಞಾನಾನುಭವಗಳ ಸಾರವಾಗಿದೆ.

ಚಿತ್ತಾಲರು ಈ ವರೆಗೆ ಐದು ಕಾದಂಬರಿಗಳನ್ನು, ಏಳು ಕಥಾ ಸಂಗ್ರಹಗಳನ್ನು ಹಾಗೂ ಒಂದು ಪ್ರಬಂಧ ಸಂಗ್ರಹವನ್ನು ಪ್ರಕಟಿಸಿದ್ದಾರೆ.

ಚಿತ್ತಾಲರು ಬೇಕಲ್ಯಾಟ ಹೈಲಮ್ ಲಿಮಿಟೆಡ್ ಕಂಪನಿಯಲ್ಲಿ ಎಕ್ಸಿಕ್ಯೂಟಿವ್ ಡೈರೆಕ್ಟರ್ ಆಗಿ ೧೯೮೮ರಲ್ಲಿ ನಿವೃತ್ತರಾಗಿದ್ದಾರೆ. ತಮ್ಮ ನಿವೃತ್ತ ಜೀವನವನ್ನು ತಮಗೆ ಅತ್ಯಂತ ಪ್ರಿಯವಾದ ಓದು ಬರಹಗಳಲ್ಲಿ ಕಳೆಯುತ್ತಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ಒಂದರ ಹಿಂದೆ ಒಂದರಂತೆ ಪ್ರಶಸ್ತಿಗಳ ಸರಮಾಲೆಯನ್ನೇ ತಮ್ಮದಾಗಿಸಿ ಕೊಂಡಿರುವ ಚಿತ್ತಾಲರು ಇಂದು ಕನ್ನಡದ ಅಗ್ರಮಾನ್ಯ ಲೇಖಕರಲ್ಲಿ ಒಬ್ಬರಾಗಿದ್ದಾರೆ.

'ಕಥೆಯಾದಳು ಹುಡುಗಿ' ಕಥಾ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗಳು 'ಶಿಕಾರಿ', 'ಪುರುಷೋತ್ತಮ' ಕಾದಂಬರಿಗಳಿಗೆ ವರ್ಧಮಾನ ಪ್ರಶಸ್ತಿ 'ಪುರುಷೋತ್ತಮ'ಕ್ಕೆ ಭಾರತೀಯ ಭಾಷಾ ಪ್ರಶಸ್ತಿ. ಒಟ್ಟು ಸಾಹಿತ್ಯಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ, ಮಾಸ್ತಿ ವೆಂಕಟೇಶ ಅಯ್ಯಂಗಾರ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (ಕರ್ನಾಟಕ ಸರ್ಕಾರದಿಂದ) ಡಾ. ಶಿವರಾಮ ಕಾರಂತ ಪ್ರಶಸ್ತಿ (ದೆಹಲಿಯ ಕರ್ನಾಟಕ ಸಂಘದಿಂದ) ಹೀಗೆ ಶ್ರೇಷ್ಠ ಪ್ರಶಸ್ತಿಗಳಿಂದ ಗೌರವಾನ್ವಿತರಾಗಿದ್ದಾರೆ.

'ಪುರುಷೋತ್ತಮ' ಕಾದಂಬರಿಯು ಕಾದಂಬರಿ ಸಾಹಿತ್ಯದಲ್ಲಿಯ ಒಂದು ಮೈಲಿಗಲ್ಲು. 'ಶಿಕಾರಿ' ಕಾದಂಬರಿಯು ಇನ್ನೊಂದು ಶ್ರೇಷ್ಠ ಕೃತಿ. ಹೀಗೆ ಇವರ ಸಾಹಿತ್ಯ ಕತೆ, ಕಾದಂಬರಿ, ವೈಚಾರಿಕ ಲೇಖನಗಳಿಂದ ಕೂಡಿದೆ.

ಚಿತ್ತಾಲರು ಹೊಸ ಹೊಸ ಪ್ರಯೋಗ ಮಾಡುತ್ತಾ ಸಾಹಿತ್ಯದಲ್ಲಿ ಗಮನಾರ್ಹ ಕೊಡುಗೆ ಕೊಟ್ಟಿದ್ದಾರೆ, ಕೊಡುತ್ತಿದ್ದಾರೆ.

ಚಿತ್ತಾಲರು ತಮ್ಮ ಬರಹದ ಮೊದಲಿನಿಂದ ಇಲ್ಲಿಯವರೆಗಿನ ತಮ್ಮ ಬರಹದ ಬದುಕಿನ ಐವತ್ತೊಂದು ವರ್ಷಗಳಲ್ಲಿ, ಐವತ್ತೊಂದು ಉತ್ತಮ ಕಥೆಗಳನ್ನು ಬರೆದಿರುವುದು ಶ್ಲಾಘನೀಯವಾಗಿದೆ. ಇವರಿಂದ ಸಾಕಷ್ಟು ಕೃತಿ ರತ್ನಗಳು ಮುಂದೆಯೂ ರಚಿತವಾಗಿ ನಮಗೆ ದೊರಕುವಂತಾಗಲಿ ಎಂದು ಆಶಿಸೋಣ.

## ಕನ್ನಡ ಭಾಷೆಯ ಚರಿತ್ರೆ

ಕನ್ನಡ ಭಾಷೆಯ
ಚರಿತೆಯ ಹೇಳುವೆ
ಕೇಳಿರಿ ಎಲ್ಲರು ನೀವಿದನು
  ಆರರ ಶತಕವು
  ಶಾಸನ ಲಿಖಿತವು
  ಹಲ್ಮಿಡಿ ಶಾಸನ ಮೊದಲಿನದು
ಒಂಬತ್ತರ ಶತ
ಪುಸ್ತಕ ನಿರ್ಮಿತ
ಲಕ್ಷಣ ಕಾವ್ಯವೆ ಆದಿಯದು
  ಹತ್ತರ ಮೂಲವು
  ಪಂಪನ ಕಾಲವು
  ಚಂಪುವು ಕಾವ್ಯದಿ ಪಸರಿಸಿತು
ಹನ್ನೊಂದರ ನಡೆ
ಗದ್ಯದ ಮುನ್ನಡೆ
ವಚನವು ಎಲ್ಲರ ಸೊತ್ತಾಯ್ತು
  ಹನ್ನೊಂದರ ಕೊನೆ
  ಕ್ರಾಂತಿ ಹೊಂದೆನೆ
  ಷಟ್ಪದಿ ಹರಡಿತು ಮನೆಮನೆಗೂ
ಹದಿನಾಲ್ಕರ ಸೆಲೆ
ಗಮಕದ ಹಿನ್ನೆಲೆ
'ಕನ್ನಡ ಭಾರತ' ಕಣ್ಮಣಿಯು
  ಹದಿನೈದರ ಫಲ
  ಭಕ್ತಿಯ ಬೆಂಬಲ
  ದಾಸರ ಪದಕಿದು ಹೆಸರಾಯ್ತು
ಹದಿನೇಳಾಯಿತು
ಹೊಸತಿಲ್ಲಿನಿತೂ
ರಚನೆಯು ನಿಂತಿಹ ನೀರಾಯ್ತು
  ಇಪ್ಪತ್ತರ ಹರಲು
  ಪಶ್ಚಿಮದ ಒಲವು
  ಮುಕ್ತದ ಛಂದಕೆ ಒಲವಾಯ್ತು
ಚರಿತೆಯ ಹೆಮ್ಮರ
ಭಾಷೆಯ ಸಿರಿಮರ
ನಮ್ಮಯ ಸಂಸ್ಕೃತಿ ತಳಹದಿಯು

-- ಶ್ರೀಮತಿ ಮೇಧಾ ಕುಲಕರ್ಣಿ

# ದಾಸ ಸಾಹಿತ್ಯದ ಪ್ರೇರಣೆಗಳು

ಡಾ. ತಾಳ್ತಜೆ ವಸಂತ ಕುಮಾರ

ಕರ್ನಾಟಕದ ದಾಸವಾಙ್ಮಯ ಪ್ರೇರಣೆಗಳನ್ನು ಸಮಗ್ರಭಾರತದ ಭಕ್ತಿ ಚಳವಳಿಯ ಹಿನ್ನೆಲೆಯಲ್ಲಿ ಗ್ರಹಿಸಬೇಕಾಗುತ್ತದೆ. ಕ್ರಿ.ಶ. ೧೨-೧೩ನೆಯ ಶತಮಾನಗಳಲ್ಲಿ ತೀರಾ ಕಠಿಣವಾದ ವೈದಿಕ ಕರ್ಮಾನುಷ್ಠಾನಗಳನ್ನು ನಿರಾಕರಿಸಿ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳುವ ಸುಲಭ ಮಾರ್ಗಗಳ ಅನ್ವೇಷಣೆಗಳು ಭಾರತದ ಉದ್ದಗಲಗಳಲ್ಲೂ ನಡೆಯತೊಡಗಿದ್ದುವು. ಇಂಥ ಪ್ರಯತ್ನಗಳ ಫಲವಾಗಿ ಮಹಾರಾಷ್ಟ್ರದ 'ನಾಥಪಂಥ' 'ಮಹಾನುಭಾವ ಪಂಥ'ಗಳು, ಬಂಗಾಳದ 'ಚೈತನ್ಯಪಂಥ' ಕಾಶಿಯ ವಲ್ಲಭಾಚಾರ್ಯರ 'ಪುಷ್ಟಿಮಾರ್ಗ' ಉತ್ತರ ಭಾರತದ ಕಬೀರದಾಸ, ಮೀರಾಬಾಯಿ ಮುಂತಾದವರ 'ಸಂತ ಪರಂಪರೆ' ದಾಕ್ಷಿಣಾತ್ಯ ವೈಷ್ಣವ (ಆಳ್ವಾರರು) ಮತ್ತು ಶೈವ (ನಾಯನಾರ್) ಆರಾಧನೆ, ಕರ್ನಾಟಕದ 'ವಚನ' ಮತ್ತು 'ದಾಸ' ಸಂಪ್ರದಾಯಗಳು ಅಸ್ತಿತ್ವಕ್ಕೆ ಬಂದು ಬೇರೆ ಬೇರೆ ವಲಯಗಳಲ್ಲಿ ಪ್ರತಿಕ್ರಿಯಿಸತೊಡಗಿದುವು. ಇವುಗಳು ಸಾಮಾಜಿಕ ಬೇಡಿಕೆ ಒತ್ತಡಗಳಿಗೆ ಪ್ರತಿಕ್ರಿಯೆಗಳಾಗಿರುವುದರಿಂದ ಯಾವುದರ ಪ್ರಭಾವಕ್ಕೆ ಯಾವುದು ಒಳಗಾಯಿತೆಂದು ನಿಖರವಾಗಿ ನಿರ್ಧರಿಸುವುದು ಕಷ್ಟಸಾಧ್ಯವಾಗಿದೆ. ಈ ಅಂತರ್ - ಶಿಸ್ತೀಯ ಅಧ್ಯಯನವಾಗಲಿ ನಿರ್ಧರಿಸುವುದು ಕಷ್ಟಸಾಧ್ಯವಾಗಿದೆ. ಈ ಅಂತರ್ - ಶಿಸ್ತೀಯ ಅಧ್ಯಯನವಾಗಲಿ ಆಳವಾದ ವಿಶ್ಲೇಷಣೆಯಾಗಲಿ ಈ ಬರಹದ ವ್ಯಾಪ್ತಿಯ ಹೊರಗಿರುವುದರಿಂದ ಕೇವಲ ಸೂಚನೆಯನ್ನಷ್ಟೇ ಇಲ್ಲಿ ಮಾಡಲಾಗಿದೆ.

ದಾಸ ಸಾಹಿತ್ಯದ ಹಿನ್ನೆಲೆಯನ್ನು ಗಮನಿಸುವಾಗ, ಅದರ ಚಾರಿತ್ರಿಕ, ರಾಜಕೀಯ, ಸಾಹಿತ್ಯಿಕ, ಸಾಮಾಜಿಕ, ಧಾರ್ಮಿಕ, ತಾತ್ತ್ವಿಕ ಮತ್ತು ಮನೋವೈಜ್ಞಾನಿಕ ನೆಲೆಗಳು ಪ್ರಸ್ತುತವೆನಿಸುತ್ತವೆ.

ಚಾರಿತ್ರಿಕ ದೃಷ್ಟಿಯಿಂದ, ಆ ಕಾಲದಲ್ಲಿ ಪ್ರಚಲಿತವಾಗಿದ್ದ ರಾಜಾಶ್ರಿತ ಸಾಹಿತ್ಯ, ಜನಾಶ್ರಿತ ಸಾಹಿತ್ಯ ಮತ್ತು ಧಾರ್ಮಿಕ ಸಾಹಿತ್ಯ ಪ್ರಕಾರಗಳು ಈ ಸಂದರ್ಭದಲ್ಲಿ ಗಮನಾರ್ಹವಾಗಿವೆ. ರಾಜಾಶ್ರಿತ ಸಾಹಿತ್ಯದ ವರ್ಗದಲ್ಲಿ ಚಂಪೂ ಸಾಹಿತ್ಯ, ಗದ್ಯಸಾಹಿತ್ಯ ಹಾಗೂ ಶಾಸನ ಹಾಗೂ ಶಾಸನ ಸಾಹಿತ್ಯಗಳು ಪರಿಗಣಿತವಾಗುತ್ತವೆ. ಜನಾಶ್ರಿತ ಸಾಹಿತ್ಯದ ವಿಭಾಗದಲ್ಲಿ ವಚನ, ಷಟ್ಪದಿ ಮುಂತಾದ ಸಾಮಾಜಿಕ ಪ್ರಸ್ತುತತೆಯನ್ನು ಒಳಗೊಂಡಿರುವ ಲೌಕಿಕ ಸಾಹಿತ್ಯ ಕೃತಿಗಳು ಬರುತ್ತವೆ. ವೈದಿಕ ಹಾಗೂ ಅವೈದಿಕ ಧಾರ್ಮಿಕ ಗ್ರಂಥಗಳು ಧಾರ್ಮಿಕ ಸಾಹಿತ್ಯ ಪ್ರಕಾರಗಳಲ್ಲಿ ಸೇರ್ಪಡೆಯಾಗುತ್ತವೆ. ಈ ಕಾಲದ ಒಟ್ಟು ಸಾಹಿತ್ಯಿಕ ಒಲವುಗಳನ್ನು ಅರ್ಥೈಸಿಕೊಳ್ಳುವಾಗ ಅದರ ಪ್ರಧಾನ, ಉಪ, ಪೋಷಕ ಮತ್ತು ಪೂರಕ ಪ್ರವಾಹಗಳ ದಿಸೆಗಳನ್ನೂ ಲಕ್ಷ್ಯದಲ್ಲಿ ಇರಿಸಿಕೊಳ್ಳಬೇಕಾಗುತ್ತದೆ.

ಸುಮಾರು ಶತಮಾನಗಳ ಇತಿಹಾಸವಿರುವ ಹರಿದಾಸ ಸಾಹಿತ್ಯದ ಮೇಲೆ ಆಂತರಿಕ ತುರ್ತು ಹಾಗೂ ಬಾಹ್ಯ ಒತ್ತಡಗಳೆರಡೂ ಪ್ರಭಾವವನ್ನು ಬೀರಿರುವುದನ್ನು ಕಾಣುತ್ತೇವೆ. ದಕ್ಷಿಣ ಕರ್ನಾಟಕದ ವಿಜಯನಗರದ ಅರಸರಿಂದ ದೊರೆತ ಪ್ರೋತ್ಸಾಹ, ಅನ್ಯಧರ್ಮೀಯರೊಂದಿಗೆ ಸ್ಪರ್ಧಿಸಬೇಕಾಗಿದ್ದ ಅನಿವಾರ್ಯತೆ, ಧಾರ್ಮಿಕ ಸಾಹಿತ್ಯದ ಜನಪದೀಯ ಪೃಥಕ್ಕರಣದ ಕಳಕಳಿ ಮುಂತಾದ ಪರಿಸರದ ಬೇಡಿಕೆಗಳಿಗೆ ದಾಸ ಸಾಹಿತ್ಯವು ಬಹು ತೀವ್ರ ಹಾಗೂ ಸೃಜನಾತ್ಮಕ ರೀತಿಯಲ್ಲಿ ಸ್ಪಂದಿಸಿತು.

ಅಭಿವ್ಯಕ್ತಿಯ ಹೊಸ ಮಾಧ್ಯಮಗಳ, ಸಾಧ್ಯತೆಗಳ ಅನ್ವೇಷಣೆಯು ಸಾಹಿತ್ಯ ಚರಿತ್ರೆಯ ಎಲ್ಲಾ ಮಹತ್ವದ ಘಟ್ಟಗಳಲ್ಲೂ ನಡೆಯುತ್ತಲೇ ಇರುತ್ತದೆ. ಮಾರ್ಗ ದೇಸಿಗಳ ಸಮನ್ವಯ. ಸಮಕಾಲೀನ ವಸ್ತುಗಳ ಆಯ್ಕೆ, ಸಾಹಿತ್ಯ ರೂಪಗಳ ಸರಳೀಕರಣ ಪ್ರಕ್ರಿಯೆಗಳು, ಶಾಸ್ತ್ರದ ನಿರ್ಬಂಧವನ್ನು ಮೀರಿ ಸೃಷ್ಟಿಶೀಲತೆಗೆ ದೊರೆತ ಪ್ರಾಧಾನ್ಯಗಳು ಈ ಹೇಳಿಕೆಗೆ ನಿದರ್ಶನಗಳಾಗುತ್ತವೆ. ಈ ದೃಷ್ಟಿಯಿಂದ ದಾಸಸಾಹಿತ್ಯವು ಒಂದು ಸಂಕ್ರಮಣ ಸ್ಥಿತಿಯಲ್ಲಿ ಅಸ್ತಿತ್ವಕ್ಕೆ ಬಂತೆನ್ನಬೇಕು. ಅಂದರೆ, ಸಂಸ್ಕೃತ ಪ್ರಧಾನವಾಗಿದ್ದ ಶಿಷ್ಟ ಸಾಹಿತ್ಯದ ಅಂತರಿಕ ಸ್ವರೂಪವೂ ಪರಿವರ್ತನಪರವಾಗಿ ಬೇರೆಯೇ ನೆಲೆಯ ಸ್ವೀಕಾರಕ್ಕೆ ಅಣಿಯಾಗಿತ್ತು. ಜನ ಸಮುದಾಯದಲ್ಲಿ ಬಿಲವಾಗುತ್ತಿದ್ದ ನೈತಿಕ, ಧಾರ್ಮಿಕ, ಸಾಂಸ್ಕೃತಿಕ ಮೌಲ್ಯಗಳ ಮರು ನಿರ್ವಚನ ಹಾಗೂ ಪುನರುತ್ಥಾನಗಳ ಅಗತ್ಯವನ್ನು ಸಮಾಜದ ಬುದ್ಧಿಜೀವಿ ವರ್ಗವು ಮನಗಂಡು ಕಾರ್ಯಶೀಲವಾಯಿತು. ಕರ್ನಾಟಕದಲ್ಲಂತೂ ಬಸವಣ್ಣನವರ ನೇತೃತ್ವದಲ್ಲಿ ಕಲ್ಯಾಣದಲ್ಲಿ ನಡೆದ ಸಾಂಸ್ಕೃತಿಕ ಸಾಮಾಜಿಕ ಪುನರುತ್ಥಾನಗಳು ಈ ಪರಿವರ್ತನೆಗಳಿಗೆ ವೇಗವರ್ಧಕಗಳಾದುವು.

ರಾಜಕೀಯವಾಗಿ ಆ ಕಾಲದಲ್ಲಿ ಹಿಂದೂ - ಮುಸ್ಲಿಂ ಸಾರ್ವಭೌಮರ ಚಕ್ರಾಧಿಪತ್ಯಗಳಿಗೆ ಸಮಾನಾಂತರದಲಿ ದೇಶಿಯ ಅಳರಸರೂ ರಾಜ್ಯಭಾರವನ್ನು ನಿರ್ವಹಿಸುತ್ತಿದ್ದರು. ರಾಜಕೀಯ ಗೊಂದಲಗಳು, ದ್ವೇಷಾಸೂಯೆಗಳು, ಸಮಯ ಸಾಧಕತನಗಳಿಂದಾಗಿ ಸಾಮನ್ಯ ಜನತೆಯೂ ಅಶಾಂತಿ, ಅಸ್ಥಿರತೆ, ಉದ್ವೇಗ, ಭಯಗಳಿಂದ ಕಂಗೆಟ್ಟಿತ್ತು. ಈ ಸಂದರ್ಭದಲ್ಲಿ ಜನತೆಗೆ ಸಾಂತ್ವನವನ್ನು ನೀಡುವ, ದೈನಂದಿನ ಬದುಕಿಗೆ ನಿರ್ದಿಷ್ಟ ಉದ್ದೇಶವನ್ನು ಕಲ್ಪಿಸುವ ಜೀವನ ದೃಷ್ಟಿಯನ್ನು ತಿದ್ದುವ ಸಾಹಿತ್ಯ ಪ್ರಕಾರವು ತೀರಾ ಅಗತ್ಯವಾಗಿತ್ತು. ಆದುದರಿಂದಲೇ ದಾಸಸಾಹಿತ್ಯದ ಪರೋಕ್ಷವಾದ ನೀತಿಬೋಧನೆಯ ವಿಧಾನವು ಜನಪ್ರಿಯವಾಯಿತು. ಸಮಾಜ ಸುಧಾರಕ ಕಾರ್ಯಗಳಲ್ಲಿ ತನ್ನನ್ನು ತೊಡಗಿಸಿಕೊಂಡ ಈ ಸಾಹಿತ್ಯ ಪ್ರಕಾರವು ಹೆಚ್ಚು ವಿಧಾಯಕವಾಯಿತು.

ದಾಸಸಾಹಿತ್ಯದ ಸಾಹಿತ್ಯಿಕ ಪ್ರೇರಣೆಗಳನ್ನು ಸ್ವಲ್ಪ ವಿವರವಾಗಿ ವಿಶ್ಲೇಷಿಸಬೇಕಾದ ಅಗತ್ಯವಿದೆ. ಅದಕ್ಕೆ ಹಿನ್ನೆಲೆಯಾಗಿ ಈ ಕೆಳಗಿನ ತಖ್ತೆಯನ್ನು ಪರಿಗಣಿಸಬಹುದಾಗಿದೆ.

ದಾಸವಾಙ್ಮಯವು ಮುಖ್ಯವಾಗಿ ಕೀರ್ತನೆ, ಪದ, ಸುಳಾದಿ, ಉಗಾಭೋಗ ಮಂಡಿಗೆ, ತತ್ತ್ವಪದಗಳಲ್ಲಿ ಅಭಿವ್ಯಕ್ತಿಯನ್ನು ಪಡೆದಿದೆ. ''ವಿಷಯಾನುಗುಣವಾದ ರೂಪವನ್ನು ಆಯ್ದು ಕೊಳ್ಳುವ ರೀತಿಯಲ್ಲಿ ಅದು ಭಾವಗೀತೆಯ ಲಕ್ಷಣವನ್ನು ಸ್ವೀಕರಿಸಿದೆ''. (ಮುಗಳಿ, ರಂ ಶ್ರೀ: ಭಾರತೀಯ ಸಾಹಿತ್ಯ ಚರಿತ್ರೆ, ೧೯೭೬, ಪು. ೨೯೬) ಎನ್ನುವ ಅಭಿಪ್ರಾಯವು ಈ ಸಂದರ್ಭದಲ್ಲಿ ಗಮನಾರ್ಹವೆನಿಸುತ್ತದೆ. ಅಂದರೆ, ''ಬನ್ನಹತೆ ಬಾಯಿಲ್ಲವಯ್ಯಾ'' (ಪುರಂದರದಾಸ) ಎನ್ನುವಂಥ ಅಂತರಂಗದ ನಿವೇದನೆಗಳು ಕೀರ್ತನೆಯ ಶಿಲ್ಪಕ್ಕೆ ಸೊಗಸಾಗಿ ಹೊಂದಿಕೊಳ್ಳುತ್ತವೆ. ಆದರೆ ''ಬೆಲ್ಲದ ಕಟ್ಟೆಯ ಕಟ್ಟಿ ಬೇವಿನ ಬೀಜವ ಬಿತ್ತಿ ಜೇನು ಮಳೆಗರೆದರೆ ವಿಷ ಹೋಗುವುದೇನಯ್ಯಾ'' ಎನ್ನುವ ತಾತ್ವಿಕ ಪ್ರತಿಪಾದನೆಗೆ ಸುಳಾದಿ - ಉಗಾಭೋಗಗಳೇ ಸಶಕ್ತ ವಾಹಕಗಳಾಗುತ್ತವೆ.

'ಎಲ್ಲಾರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' (ಕನಕದಾಸ) ಎನ್ನುವ ಸೂಕ್ಷ್ಮ ವಿಡಂಬನೆಯ ನಿರ್ವಹಣೆ,

''ದಾಸನೆಂತಾಗುವೆನು ಧರೆಯೊಳಗೆ ನಾನು
ಗೂಟನಾಮವ ಹೊಡೆದು ಗುಂಡ ತುಂಬಿಗೆ ಹಿಡಿದು
ಗೋಚಂಚು ಧೋತರ
ಮಡಿಯನುಟ್ಟು''(ಪುರಂದರದಾಸ)

ಎನ್ನುವ ಶಬ್ದಚಿತ್ರಣ, 'ರಂಗನಾಯಕ ರಾಜೀವಲೋಚನ (ಪುರಂದರದಾಸ) ದಂತ ನಾದಮಯತೆ ಲಾಲಿತ್ಯಗಳು ಕೀರ್ತನೆ ಪದಗಳಲ್ಲಿ ವ್ಯಕ್ತವಾದ ರೀತಿಯೂ ಈ ಹೇಳಿಕೆಯನ್ನು ಸಮರ್ಥಿಸುತ್ತದೆ.

ಒಂದರ್ಥದಲ್ಲಿ ಅತಿಶಾಸ್ತ್ರೀಯತೆಯ ಎಲ್ಲೆಕಟ್ಟನ್ನು ಮೀರಿ, ತನ್ನ ಗೇಯಗುಣ ಹಾಗೂ ಭಾವನಿರ್ಭರ ಅಭಿವ್ಯಕ್ತಿಗಳ ಸಹಾಯದಿಂದ

ಜನಮಾನಸಕ್ಕೆ ಹತ್ತಿರವಾಗುವುದು ದಾಸ ಸಾಹಿತ್ಯಕ್ಕೆ ಸಾಧ್ಯವಾಯಿತು. ಚಾರಿತ್ರಿಕವಾಗಿ ನೋಡಿದರೆ, ಕನ್ನಡ ಸಾಹಿತ್ಯದ 'ಶೈಶವ ಕಾಲದಲ್ಲಿಯೇ ಹಾಡು, ಮೆಲ್ಹಾಡು ಬಾಜನೆಗಬ್ಬ ಮುಂತಾದ ಸಾಹಿತ್ಯ ಪ್ರಕಾರಗಳಿದ್ದುವು ಎಂಬುದು ವಿದಿತವೇ ಇದೆ. ವಚನಗದ್ಯ ಮತ್ತು ಕೀರ್ತನೆಗಳ ನಡುವಿನ ರೂಪವನ್ನು 'ಸುಳಾದಿ'ಗಳಲ್ಲಿ ಕಾಣುತ್ತೇವೆ. ಇಲ್ಲಿ ಲಯವು ಮುಖ್ಯವೆನಿಸಿದರೆ, ಉಗಾಭೋಗಗಳಲ್ಲಿ ಸ್ವರವು ಪ್ರಧಾನವಾಯಿತು. ಉದ್ಗ್ರಾಹ, ಮೇಲಾಪಕ, ಧ್ರುವ, ಅಂತರ, ಆಭೋಗಗಳನ್ನು ಉಗಾಭೋಗದ ಐದು ಧಾತುಗಳಾಗಿ ಗುರುತಿಸಲಾಗಿದೆ. ''ಇಷ್ಟನ್ನೂ ಮೂಕರಾಗದಲ್ಲಿ ವಿನ್ಯಾಸ ಮಾಡದೆ, ಲಲಿತಸಾಹಿತ್ಯ ಸಹಿತವಾಗಿ ಪೂರ್ಣ ಮಾಡಿದರೆ ಅದು ಉಗಾಭೋಗವೆನಿಸುವುದು'' (ಬೇಲೂರು ಕೇಶವದಾಸ, ಹರಿದಾಸ ಸಾಹಿತ್ಯ ಪು. ೧೮) ಎಂಬುದಾಗಿ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಭಾವ ರೂಪಗಳೆರಡರ ದೃಷ್ಟಿಗಳಿಂದಲೂ ಉಗಾಭೋಗವು ವಚನಸಾಹಿತ್ಯ ಪ್ರಕಾರಕ್ಕೆ ಹತ್ತಿರದ್ದಾಗುತ್ತದೆ.

ಛಂದೋರೂಪಗಳನ್ನು ಗಮನಿಸಿದರೆ ತ್ರಿಪದಿ, ಚೌಪದಿ, ಷಟ್ಪದಿ, ಸಾಂಗತ್ಯಗಳ ಪ್ರಬೇಧಗಳು ದಾಸರ ಕೀರ್ತನೆಗಳಲ್ಲಿ ವಿಶಿಷ್ಟವಾದ ಸಂಯೋಜನೆಯನ್ನು ಪಡೆದುದನ್ನು ಗುರುತಿಸುತ್ತೇವೆ.

ಅಲ್ಲಮ ಪ್ರಭುವಿನಂಥ ಕೆಲವು ವಚನಕಾರರು ಮತ್ತು ಕನಕದಾಸರೇ ಮೊದಲಾದ ದಾಸರು ಆಧ್ಯಾತ್ಮದ ಗಹನ ತತ್ತ್ವಗಳ ಇರೂಪಣೆಗೆ ''ಗೂಢ ಪದರಚನೆ''ಗಳನ್ನು ಮಾಧ್ಯಮವಾಗಿ ಬಳಸಿಕೊಂಡರು. ಇದನ್ನೇ ಬೌದ್ಧ ಪರಿಭಾಷೆಯಲ್ಲಿ 'ಸಂಧಾಭಾಷಾ' ಎನ್ನಲಾಗಿದೆ. ಈ ಪ್ರಕಾರಕ್ಕೆ ಒಗಟು, ಒಡಪು, ಬೆಡಗು, ಪ್ರಹೇಳಿಕೆ, ಮುಂಡಿಗೆ, ಭಾರೂಡ ಮುಂತಾದ ಪರ್ಯಾಯ ನಾಮಗಳಿವೆ. ಇದರ ಮೂಲ ರೂಪವನ್ನು ಋಗ್ವೇದದ ಪ್ರಸಿದ್ಧ ಶ್ಲೋಕವಾದ

''ಚತ್ವಾರಿ ಶೃಂಗಾಸ್ತ್ರಯೋಸ್ಯ ಪಾದಾ
ದ್ವೇ ಶೀರ್ಷೆ ಸಪ್ತ ಹಸ್ತಾಸೋ ಅಸ್ಯ
ತ್ರಿಧಾ ಬದ್ಧೋ ವೃಷಭೋರೋರವೀತಿ
ಮಹಾದೇವೋ ಮರ್ತಮಾರ್ತ್ಯಾ ಅವಿಶೇಷ''

''ನಾಲ್ಕು ಕೊಂಬುಗಳು ಮೂರು ಕಾಲುಗಳು
ಎರಡು ತಲೆ ಏಳು ಕೈಗಳು
ಮೂರೆಳೆಯಿಂದ ಕಟ್ಟಿದ ಎತ್ತು ಗುಟುರು ಹಾಕುತ್ತಿದ್ದ
ಅನಂತ ಮಹಿಮೆಯ ದೇವನು ಮರ್ತ್ಯಕ್ಕೆ ಇಳಿದಿದ್ದಾನೆ.''

(ಅನು : ಕೃಷ್ಣಮೂರ್ತಿ ಕೆ.)

ಎದಲ್ಲಿ ಕಾಣಬಹುದಾಗಿದೆ. ವಿವಿಧ ವ್ಯಾಖ್ಯಾನುಗಳನ್ನು ಅಸಂಖ್ಯ ಅರ್ಥ ವಿನ್ಯಾಸಗಳನ್ನು ಪಡೆಯಬಲ್ಲ ಈ ಮಾದರಿಯ ರಚನೆಗಳು ದಾಸ ಸಾಹಿತ್ಯದಲ್ಲಿ ಧಾರಾಳವಾಗಿವೆ.

ಉದಾಹರಣೆಗೆ :

''ಕಣ್ಣಿಲ್ಲದಾತನು ಕಂಡ ಪಿಡಿದ ಮೃಗ
ಕೈಯಿಲ್ಲದಾತನೆಚ್ಚ
ಮಣ್ಣಲ್ಲಿ ಹೊರಳುವ ಕಾಲಿಲ್ಲದಾತನು
ಗಣ್ಯವಿಲ್ಲದೆ ಪಿಡಿದ'' (ಕನಕದಾಸ)

ಅಥವಾ,

''ನೀರಿಲ್ಲದೆ ನೆರಳಿಲ್ಲದೆ ಬೇರಿಲ್ಲದೆ ಸಸಿ ಹುಟ್ಟಿ
ಹೂವಿಲ್ಲದೆ ಕಾಯಿಲ್ಲದೆ ಅದು ಫಲಕೆ ಬಂದು
ಕರವಿಲ್ಲದೆ ಕಾಲಿಲ್ಲದೆ ಕೊಯ್ಯುರಯ್ಯರು ಆ ಹಣ್ಣನು
ಮರುಳಾಯಿತು ಮೂವತ್ತು ಸಾವಿರ ಮಂದಿ

(ಪುರಂದರದಾಸ)

ಎನ್ನುವ, ಅರ್ಥವನ್ನು ನಿಗೂಢವಾಗಿಯೇ ಇರಿಸಿಕೊಳ್ಳುವ ಭಾಗಗಳನ್ನು ಗಮನಿಸಬಹುದು. ಸರಳ ಅಭಿವ್ಯಕ್ತಿಗೆ ಒತ್ತು ಕೊಟ್ಟ ದಾಸಪಂಥವೂ ಇಂಥ ಸಂಕೀರ್ಣತೆಯನ್ನು ಪ್ರಯತ್ನಪೂರ್ವಕವಾಗಿ ಉಳಿಸಿಕೊಂಡುದರ ಹಿಂದೆ ಪಂಡಿತ ಮನ್ನಣೆಯ ಸೂಕ್ಷ್ಮ ಆಕಾಂಕ್ಷೆಯೂ ಅಡಗಿತ್ತೇ, ಅಥವಾ ಅವರೂ ಅರ್ಥೈಸಿಕೊಳ್ಳಲಾರದ ತಾತ್ವಿಕ ಗಹನತೆಯನ್ನು ಹೀಗೆ ಅಭಿವ್ಯಕ್ತಿಸಿ ಅವರು ಪಾರಾದರೇ ಎನ್ನುವ ಪ್ರಶ್ನೆಗಳೂ ಇಲ್ಲಿ ಏಳುತ್ತವೆ.

ದಾಸ ವಾಙ್ಮಯವು ಭಾಷೆ, ಅಭಿವ್ಯಕ್ತಿ ಹಾಗೂ ವೈವಿಧ್ಯಗಳ ದೃಷ್ಟಿಗಳಿಂದ ಧಾರ್ಮಿಕ, ಲೌಕಿಕ ಹಾಗೂ ಜನಪದ ಸಾಹಿತ್ಯಗಳಿಗೆ ಋಣಿಯಾಗಿದೆ. ವಚನಗಳು, ಕುಮಾರವ್ಯಾಸ ಭಾರತದಂಥ ಮಧ್ಯಕಾಲೀನ ಕೃತಿಗಳು, ಚಾರಿತ್ರಿಕ ಬರಹಗಳು, ಮೌಖಿಕ ಕಾವ್ಯಪರಂಪರೆ, ಜಾನಪದದ ಸಾಂಸ್ಕೃತಿಕ ಘಟಕಗಳು ಇವೆಲ್ಲ ದಾಸ ವಾಙ್ಮಯದ ಸಂರಚನೆಗೆ ಸಹಕರಿಸಿದವುಗಳೇ ಆಗಿವೆ.

ಇಲ್ಲಿ ಸೂತ್ರದ ಗೊಂಬೆಯಾಟ, ಡೊಳ್ಳಿನಾಟಗಳಂಥ ಜಾನಪದ ಕಲೆಗಳ ಪ್ರಸ್ತಾಪಗಳು ಅವುಗಳ ವಾಚ್ಯ ಮತ್ತು ಪ್ರತೀಕಾತ್ಮಕ ಎರಡೂ ನೆಲೆಗಳಲ್ಲಿ ಪ್ರಸ್ತುತವಾಗುತ್ತವೆ. 'ಕರಗಸವೆತ್ತ ಕದಳಿಯೆತ್ತ (ಕನಕದಾಸ) ಎನ್ನುವಂಥ ಗಾದೆಗಳು, ಪಡೆನುಡಿಗಳು, 'ಕುಂಟೆ ತುದಿಗೆ ಕೊರದು ಹಾಕಿ ಹೆಂಟೆ ಮಣ್ಣು ಸಮಮಾಡಿ (ಕನದಾಸ) ಮಾದರಿಯ ರೂಪಕಗಳು ದಾಸಸಾಹಿತ್ಯದಲ್ಲಿ ಇಡಿದಿಕಿರಿದಿರುವುದನ್ನು ಕಾಣುತ್ತೇವೆ. ದಾಸಸಾಹಿತ್ಯದ ಅಭಿವ್ಯಕ್ತಿಯಲ್ಲಿ ಹಿರಿಯ ಹಾಗೂ ಕಿರಿಯ ಸಂಸ್ಕೃತಿಗಳ ಭಾಷೆಗಳೊಂದಿಗೆ ಅನ್ಯ ಭಾಷಾ ಪ್ರಯೋಗಗಳೂ ತಲೆಹಾಕಿವೆ. ಮುಖ್ಯವಾಗಿ ದ್ವಿಭಾಷಾ ಪ್ರದೇಶಗಳ ಜನಸಾಮಾನ್ಯರನ್ನು ತನ್ನಡೆಗೆ ಆಕರ್ಷಿಸಿಕೊಳ್ಳುವ ಸೂತ್ರವೇ ಇದರ ಹಿನ್ನೆಲೆಯಲ್ಲಿದೆಯೆನಿಸುತ್ತದೆ.

ವಸ್ತುವಿನ ದೃಷ್ಟಿಯಿಂದ, ದಾಸಸಾಹಿತ್ಯವು ಅಪಾರವಾದ ಹರಹನ್ನು ಪಡೆದಿದೆ. ಅವುಗಳನ್ನು ಸಾಮುದಾಯಿಕ ಜೀವನದರ್ಶನಾತ್ಮಕ, ಆಧ್ಯಾತ್ಮಿಕ, ದೈವಸಂಕೀರ್ತನಾತ್ಮಕ ಹಾಗೂ ಮೌಲ್ಯಪ್ರತಿಪಾದಾತ್ಮಕ ನೆಲೆಗಳಲ್ಲಿ ನೋಡಬಹುದಾಗಿದೆ. ಈ ಮೊದಲೇ ಪ್ರಸ್ತಾಪಿಸಿದಂತೆ, ಇಲ್ಲಿ ದಾಸ ಸಾಹಿತ್ಯವು ವಿಲಕ್ಷಣವಾದ ರಕ್ಷಣಾ ವ್ಯೂಹವೊಂದನ್ನು ರಚಿಸಿಕೊಂಡಿದೆ. ಅನ್ಯಧರ್ಮಗಳ ಜನಪ್ರಿಯತೆ, ಹಿಂದೂ ಧರ್ಮದ ಒಳಗೆಬೆಳೆಯುತ್ತಿದ್ದ ನಾಸ್ತಿಕತೆ ವಿಷಯಾಕರ್ಷಣೆ ಅಭಿಪ್ರಾಯ ಭೇದ ಒಡಕುಗಳ ವಿರುದ್ಧದ ಸೂಕ್ಷ್ಮವಾದ ಆದರೆ ಪರಿಣಾಮ ಕಾರಿಯಾದ ಹೋರಾಟದ ಸಿದ್ಧತೆಯಾಗಿ ಇದು ಕಂಡುಬರುತ್ತದೆ.

ದಾಸಸಾಹಿತ್ಯದ ಸಾಮಾಜಿಕ ಪ್ರೇರಣೆಗಳನ್ನು ಲಕ್ಷಿಸಿದಾಗ ನಮಗೆ ಅಲ್ಲಿಯ ಮೂರು ಮುಖ್ಯ ನೆಲೆಗಳು ಸ್ಪಷ್ಟವಾಗುತ್ತವೆ. ವ್ಯಕ್ತಿಯು ವೈಯಕ್ತಿಕ ನೆಲೆಯಲ್ಲಿ ಸಮಾಜ ಬಾಂಧವರೊಂದಿಗೆ ವಿನಿಮಯ ಮಾಡಿಕೊಳ್ಳುವ ಸಾಂಸ್ಕೃತಿಕ ಅಂಶಗಳು, ವಿಚಾರಗಳು, ಗೊಂದಲಗಳು, ಪ್ರಶ್ನೆಗಳು, ತಾಕಲಾಟಗಳು ಇಲ್ಲಿ ಒಂದು ಮಗ್ಗುಲಿಗೆ ನಿಲ್ಲುತ್ತವೆ. ಮುಂದಿನ ನೆಲೆಯಲ್ಲಿ ಸಮಾಜದ ಘಟಕಗಳ ಸಾಮೂಹಿಕ ಸಂವೇದನೆಗಳು ಪರಿಗಣಿತವಾಗುತ್ತವೆ. ಇದರ ವ್ಯಾಪ್ತಿಯು ಮತ್ತಷ್ಟು ವಿಸ್ತಾರಗೊಂಡಾಗ ಇಡಿಯ ವ್ಯವಸ್ಥೆಯ ಲೋಪದೋಷಗಳೇ ಸಾಹಿತ್ಯ ನಿರ್ಮಾಣಕ್ಕೆ ಸ್ಫೂರ್ತಿಯನ್ನು ನೀಡುತ್ತವೆ. ಇದು ಸಮರ್ಥನೆ, ಪ್ರತಿಕ್ರಿಯೆ, ನಿರಾಕರಣೆ, ಸುಧಾರಣೆ, ಬದಲಾವಣೆ ಮುಂತಾದ ಬಹುಮುಖಿಯಾದ ಕ್ರಿಯಾತ್ಮಕತೆಯಲ್ಲಿ ಪರಿಣಮಿಸುತ್ತದೆ.

'ಜನರ ನಡತೆ ಕೇಳಿರಯ್ಯ ಇಂಥ
ಜನರ ನೋಡಿ ನೀವು ಏನೆಂಬಿರಯ್ಯ'
(ಪುರಂದರದಾಸ)

ಎನ್ನುವ ಹತಾಶೆ, 'ರೊಕ್ಕ ಎರಡಕ್ಕೂ ದುಃಖ ಕಾಣಕ್ಕ'(ಪುರಂದರದಾಸ) ಎನ್ನುವ ವಾಸ್ತವದ ಅರಿವಿನೊಂದಿಗೆ ವಿಡಂಬನೆಯ ಚಾಟಿಯೇಟನ್ನೂ ಹಲವಾರು ಸಂದರ್ಭಗಳಲ್ಲಿ ಕೊಡುತ್ತದೆ.

''ಕುಲ ಕುಲ ಕುಲವೆನ್ನುತಿಹರು, ಕುಲ ಯಾವುದು ಸತ್ಯ ಸುಖವುಳ್ಳ ಜನರಿಗೆ'' (ಕನಕದಾಸ) ಎನ್ನುವಾಗಿನ ಸಾಮಾಜಿಕ ವ್ಯವಸ್ಥೆಯ ನಿರಾಕರಣೆಯೂ ಪ್ರಭಾವಶಾಲಿಯಾಗಿದೆ.

''ಶೀಲವರಿತು ಭಕುತಿ ಮಾಳ್ಪ ಚಂಡಾಲರ ಮನೆಯ ಬಾಗಿಲ ಕಾಯಿಸೆನ್ನ'' (ಕನಕದಾಸ) ಎನ್ನುವಂಥ, ಸಮಾಜದ ಅನಿಷ್ಟ ಪದ್ಧತಿಗಳ ವಿರುದ್ಧ ಪ್ರತಿಭಟನೆಯ ಕಾವನ್ನು ಅಭಿವ್ಯಕ್ತಿಸುವ ಉದಾಹರಣೆಗಳೂ ಇಲ್ಲಿ ಧಾರಾಳವಾಗಿವೆ.

ವೈಯಕ್ತಿಕ ನೆಲೆಯಲ್ಲಿ ನಡೆದ ಸಾಮಾಜಿಕ, ಧಾರ್ಮಿಕಹಾಗೂ ಸೈದ್ಧಾಂತಿಕ ಸಂಘರ್ಷಗಳು ಹಾಗೂ ವಾಙ್ಮಯದ ರಚನೆಗೆ ಸೂಕ್ತ ಪ್ರೇರಣೆಗಳಾದುವು. ಅಂದರೆ, ಕುರುಬನಾದ ಕನಕದಾಸನಲ್ಲಿ ಹುಟ್ಟಿಕೊಂಡ ವೈಯಕ್ತಿಕ ಪ್ರಶ್ನೆಗಳು. ಆತ್ಮ ವಿಶ್ವಾಸದ ಮಜಲುಗಳನ್ನು ಏರುತ್ತಿದ್ದ ವ್ಯಕ್ತಿತ್ವ. ''ನಾನು ಇದನ್ನು ಏಕೆ ಮಾಡಬಾರದು?'' ಎಂಬ ತಾರ್ತಿಕ ತಾತ್ತ್ವಿಕ ವಿವೇಚನೆಗಳು ಇಲ್ಲಿ ಕ್ರಿಯಾಮುಖಿಯಾಗಿವೆ. ಈ ಅರ್ಥದಲ್ಲಿ ರೂಢಮೂಲವಾಗಿದ್ದ ಸಂಪ್ರದಾಯಕ್ಕೆ ವ್ಯತಿರಿಕ್ತವಾದ ಸಾಧ್ಯತೆಗಳನ್ನು 'ಕನಕನ ಕಿಂಡಿ'ಯ ಪವಾಡವು ತುಂಬ ಧ್ವನಿಪೂರ್ಣವಾಗಿ ಸೂಚಿಸುತ್ತದೆ.

ಅಂತೆಯೇ ವಚನ ಸಾಹಿತ್ಯವು ಪರಿಚಯಿಸಿದ ಸಾಮಾಜಿಕ -ಧಾರ್ಮಿಕ ಹೊಸತನಗಳು, ಸ್ಥಿತ್ಯಂತರಗಳು ದಾಸ ಪರಂಪರೆಯು ತೊಡಗಿಕೊಂಡಿದ್ದ ಹೊಸ ಮಾರ್ಗದ ಹುಡುಕಾಟಕ್ಕೆ ಹೆಚ್ಚಿನ ಚಾಲನೆಯನ್ನಿತ್ತುವು. ಇದಕ್ಕೆ ಪೂರಕವಾಗಿಯೇ ತ್ರಿಮತಗಳ ಮೂಲಕ ಬಂದ ಸಮಾಜ ಸುಧಾರಕ ಪ್ರಯತ್ನಗಳು, ಪಂಚಾಯತನ ಪರಿಕಲ್ಪನೆ, ವಿಶಿಷ್ಟಾದ್ವೈತದ ಸಮಾಜವಾದೀ ನಿಲುವುಗಳು, ಮಧ್ವಾಚಾರ್ಯರ ಪ್ರಭಾವಗಳು ಕೆಲಸ ಮಾಡಿದುವು. ಈ ಎಲ್ಲವೂ ಜಡ್ಡು ಕಟ್ಟಿದ್ದ ಸಾಮಾಜಿಕ ವ್ಯವಸ್ಥೆಯ ವಿರುದ್ಧದ ಸಾಮೂಹಿಕ ಸಂಘರ್ಷವಾಗಿ ರೂಪುಗೊಂಡುವು.

ಇಲ್ಲಿ ಉಲ್ಲೇಖಿಸಲೇಬೇಕಾದ ಮಹತ್ವದ ಮಾತೆಂದರೆ, ದಾಸ ಸಾಹಿತ್ಯದ ಒಟ್ಟಾರೆಯಾದ ಬಂಡಾಯದ ಧ್ವನಿಯಾಗಲಿ, ಪ್ರತಿಭಟನೆಯ ಆಶಯವಾಗಲಿ ಅವುಗಳ ಲಿಖಿತ ದಾಖಲೆಗಳಾಗಿ ಉಳಿಯುತ್ತವೆಯೇ ಹೊರತಾಗಿ, ಸಾಮೂಹಿಕ ಚಳವಳಿಯಾಗಿ ಸಂಘಟನೆಯನ್ನು ಪಡೆಯುವುದಿಲ್ಲ. ಈ ಮಾತಿಗೆ ಸ್ವಲ್ಪ ವಿವರಣೆಯ ಅವಶ್ಯವಿದೆ. ಕನ್ನಡದ ಸಂದರ್ಭದಲ್ಲಿಯೇ ಈ ದಾಸ ಪರಂಪರೆಗೆ ನಿಕಟಪೂರ್ವದಲ್ಲಿಯೇ ಇದೇ ನೆಲದಲ್ಲಿ ನಡೆದ ವಚನ ಚಳವಳಿಯಂಥ ಸಾಮೂಹಿಕ ಸ್ವರೂಪವು ದಾಸ ಪರಂಪರೆಗೆ ಕೂಡಿ ಬರಲಿಲ್ಲ. ಹಾಗಾಗಿಯೇ ಹರಿದಾಸರ ಅಭಿವ್ಯಕ್ತಿಗಳೂ ವೈಯಕ್ತಿಕ ಮಟ್ಟದ ಸಾಧನೆಗಳಷ್ಟೇ ಆಗಿ ಉಳಿದುವು.

ಇದನ್ನು ಒಂದು ಉದಾಹರಣೆಯ ಮೂಲಕ ಸ್ಪಷ್ಟಪಡಿಸಬಹುದಾಗಿದೆ. ದಾಸ ವಾಙ್ಮಯವು ರೂಪು ಪಡೆಯುತ್ತಿದ್ದ ಕಾಲದ ಸಾಮಾಜಿಕ ಸ್ಥಿತಿಯನ್ನು ನಿದರ್ಶನಾರ್ಥವಾಗಿ - ಈ ಕೆಳಗಿನಂತೆ ನಿರೂಪಿಸಬಹುದು.

೧. ಆಚರಣೆಗೆ ಮಹತ್ವ.

೨. ಜಾತಿ - ವರ್ಗ ವ್ಯವಸ್ಥೆ.

೩. ಪುರುಷ ಪ್ರಾಧಾನ್ಯ.

೪. ಸಂಕೀರ್ಣ ಪರಿಸರ.

ದಾಸ ಸಾಹಿತ್ಯದ ಪ್ರಾಬಲ್ಯವಿದ್ದ ಕಾಲದಲ್ಲಿ ಕೂಡ ಈ ಪರಿಸ್ಥಿತಿಯಲ್ಲಿ ತೀವ್ರವಾದ ಬದಲಾವಣೆಯಾದುದಕ್ಕೆ ಬಲವಾದ ಸಾಕ್ಷ್ಯಗಳಿಲ್ಲ. ಅಂದರೆ ದಾಸ ಸಾಹಿತ್ಯ ಪ್ರವೇಶ ಪೂರ್ವದ ಸಮಾಜ ಮತ್ತು ಪ್ರವೇಶೋತ್ತರ ಸಮಾಜದ ಆಂತರಿಕ ರಚನೆಗಳಲ್ಲಿ, ಮನೋಭಾವಗಳಲ್ಲಿ ಮೂಲಭೂತವಾದ ವ್ಯತ್ಯಾಸಗಳು ಕಂಡುಬರುವುದಿಲ್ಲ.

ಈ ಪ್ರಕ್ರಿಯೆಯನ್ನು

೧. ವ್ಯವಸ್ಥೆಯೇ ವ್ಯವಸ್ಥೆಯನ್ನು ಧಿಕ್ಕರಿಸುತ್ತದೆ. (Stimules)

೨. ಎಚ್ಚರವು ಮೂಡುತ್ತದೆ. (Awareness)

೩. ಪ್ರತಿಯೆಯು ಹುಟ್ಟುತ್ತದೆ. (Reaction)

೪. ಹೊಸ ವ್ಯವಸ್ಥೆಯು ಸಿದ್ಧವಾಗುತ್ತದೆ. (Result)

ಎನ್ನುವ ಸೂತ್ರಾತ್ಮಕ ಹಂತಗಳಿಗೆ ಹೊಂದಿಸಬಹುದಾಗಿದೆ. ದಾಸ ಪರಂಪರೆಯ ಚಟುವಟಿಕೆಗಳಲ್ಲಿ ವ್ಯವಸ್ಥೆಯ ಧಿಕ್ಕಾರ, ಎಚ್ಚರ, ಪ್ರತಿಕ್ರಿಯೆಗಳ ಹಂತಗಳಿದ್ದರೂ ಅದು ಹೊಸ ವ್ಯವಸ್ಥೆಯನ್ನು ಪರಿಚಯಿಸುವುದಿಲ್ಲ. ಆ ಮಟ್ಟಿಗೆ ಇದು ವಿಫಲವಾಗಿದೆ ಎನ್ನಬೇಕಾಗುತ್ತದೆ.*

ದಾಸ ವಾಙ್ಮಯದ ಧಾರ್ಮಿಕ ಪ್ರೇರಣೆಗಳ ಸಂದರ್ಭದಲ್ಲಿ ಈ ಕೆಳಗಿನ ಅಂಶಗಳನ್ನು ಪರಿಗಣಿಸಬಹುದು.

೧. ಪರಿಕಲ್ಪನೆಗಳ ಕ್ಲಿಷ್ಟತೆ.

೨. ಆಚರಣೆಗಳ ಕಠಿಣತೆ.

೩. ಹೊಸ ಧಾರ್ಮಿಕ ಪಂಥಗಳು.

೪. ಹೊಸ ಸಿದ್ಧಾಂತಗಳ ಪ್ರಾಚುರ್ಯ

೫. ಅನ್ಯ ಧರ್ಮಗಳ ಋಣಾತ್ಮಕ ಪ್ರಭಾವ.

೬. ಧಾರ್ಮಿಕ ಅಸ್ಮಿತೆಗಾಗಿ ಹುಡುಕಾಟ

೭. ಬಿಟ್ಟೂ ಧಾರ್ಮಿಕ ಚೌಕಟ್ಟಿನ ಬಗೆಗೆ ಜನತೆಗಾದ ಭ್ರಮ ನಿರಸನ.

ದಾಸ ಸಾಹಿತ್ಯದ ಉದಯ ಕಾಲದಲ್ಲಿ ಬೀಜಾಕ್ಷರ. ಮೋಕ್ಷ, ಪರಮಾತ್ಮ ತತ್ತ್ವ, ಜೀವ-ದೇವ ಸಂಬಂಧ ಮುಂತಾದ ಪರಿಕಲ್ಪನೆಗಳೂ ವೈದಿಕ ಪಾರಿಭಾಷಿಕಗಳೂ ಧರ್ಮವನ್ನು ಜನತೆಯಿಂದ ಬಹುದೂರದಲ್ಲಿರಿಸಿದ್ದುವು. ಈ ತಲ್ಲಣದ ಎಡೆಯಲ್ಲಿಯೇ ಅನ್ಯಮತೀಯರ ಪರೋಕ್ಷ ಪ್ರಭಾವದಿಂದಾಗಿ ಜನತೆಯು ಹಿಂದೂ ಧರ್ಮ-ದೇವರುಗಳಲ್ಲಿ ಆಸಕ್ತಿಯನ್ನು ಕಳೆದುಕೊಳ್ಳ ತೊಡಗಿತ್ತು. ಈ ಸಂಧಿಕಾಲದಲ್ಲಿ ತ್ರಿಮತಗಳೂ, ಶೈವ - ವೀರಶೈವ ಸಿದ್ಧಾಂತಗಳೂ ಅಸ್ತಿತ್ವಕ್ಕೆ ಬಂದುವು. ಈ ಹಿನ್ನೆಲೆಯಲ್ಲಿ, ಸಮಾಜದ ಪ್ರಜ್ಞಾವಂತ ವರ್ಗವು ಹಿಂದೂಧರ್ಮದ ಅನನ್ಯತೆಯರ ಶೋಧಕ್ಕೆ ಹೊರಟಿತು. ಇದರ ಫಲವಾಗಿ ದಾಸ ಸಾಹಿತ್ಯದ ನಿರ್ಮಾಣಕ್ಕೆ ಸೂಕ್ತ ನೆಲೆಯು ಕಲ್ಪಿತವಾಯಿತು.

ಮುಂದಿನ ಹಂತದಲ್ಲಿ ಈ ಸಾಹಿತ್ಯ ಪ್ರಕಾರದ ತಾತ್ವಿಕ ಪ್ರೇರಣೆಗಳು ಉಲ್ಲೇಖಾರ್ಹವಾಗಿವೆ. ಈ ಮೊದಲೇ ಪ್ರಸ್ತಾಪಿಸಿದ ಆಕರಗಳಲ್ಲಿ ಬಂದ ಕೆಲವು ತತ್ತ್ವಗಳು ಈ ದಾಸರಿಗೆ ತಮ್ಮ ಧ್ಯೇಯ ಸಾಧನೆಗೆ ಸಮರ್ಥ ಮಾಧ್ಯಮಗಳೆನಿಸಿದುವು. ಅವುಗಳ ಅನ್ವಯಿಕತೆ (Applicability) ಅಂಗೀಕಾರ (Acceptance) ಮತ್ತು ಸ್ವೀಕಾರಾರ್ಹತೆ (Adapatbility) ಗಳನ್ನು ಇವರು ತಮ್ಮ ಅವಶ್ಯಕತೆಗಳಿಗೆ ಅನುಗುಣವಾಗಿ ಬಳಸಿಕೊಂಡರು. ವಿದ್ಯಾಬಲ, ಜ್ಞಾನಬಲ, ಸಂಸ್ಕಾರಬಲ, ಧನಬಲ, ದೇಬಹಲಗಳನ್ನು ಒಳಗೊಂಡ 'ಬಲಪಂಚಕತ್ವ, ಬಿಂಬ ಉಪಾಸನೆಯ ತತ್ತ್ವ ಮಾನಸಪೂಜೆ, ಶರಣ ತತ್ತ್ವ ಮುಂತಾದುವುಗಳಿಗೆ ಇದ್ದ ಸಂವಹನ ಸುಭಗತೆಯು ದಾಸರನ್ನು ಬಲವಾಗಿ ಆಕರ್ಷಿತು. ಗಹನ ವಿಚಾರಗಳನ್ನು ಜನರಿಗೆ ಪರಿಚಯಿಸುವ ದಾರಿಗಳನ್ನು ಸೂಚಿಸಿತು. ಈ ತಾತ್ತ್ವಿರ ನೆಲೆಗಟ್ಟು, ದಾಸಸಾಹಿತ್ಯದ ವಾಹಿನಿಗೆ ತಕ್ಕ ಪಾತ್ರವನ್ನು ನಿರ್ಮಿಸಿಕೊಟ್ಟಿತು.

ಈ ವಿವೇಚನೆಯ ಕೊನೆಯ ಹಂತದಲ್ಲಿ, ದಾಸಸಾಹಿತ್ಯವು ಮನೋವೈಜ್ಞಾನಿಕ ದೃಷ್ಟಿಯಿಂದಲೂ ಹೇಗೆ ಪ್ರೇರಣೆಯನ್ನು ಪಡೆಯಿತೆನ್ನುವುದನ್ನು ಗಮನಿಸಬಹುದು. ಇಲ್ಲಿ ವಿಭಿನ್ನ ಪ್ರಜ್ಞಾನೆಲೆಗಳು, ಪರಿಕಲ್ಪನೆಗಳ ನೆಲೆಗಳು ಹಾಗೂ ಮಿಥ್ಯಾ ಸಿದ್ಧಾಂತಗಳನ್ನು ಆದರಿಸಿದ ಸಾಮಾನ್ಯೀಕರಣಗಳು ಮುಖ್ಯವಾಗುತ್ತವೆ.

ವೈಯಕ್ತಿಕ ಮತ್ತು ಸಾಮೂಹಿಕ ಮಟ್ಟದ ಮೇಲರಿಮೆ -ಕೀಳರಿಮೆಗಳು, ಲಿಂಗಾಧಾರಿತ ಮೌಲ್ಯ ವ್ಯವಸ್ಥೆ, ಶೋಷಣೆಯಿಂದ ಹುಟ್ಟಿಕೊಂಡ ಪ್ರತಿಕ್ರಿಯಾಶೀಲತೆ, ಅಂತರ್ಮುಖತೆ, ಒಂಟಿತನಗಳು ಎಲ್ಲ ಕಾಲದ ಜೀವಂತ ಸಾಹಿತ್ಯಗಳಿಗೂ ಪ್ರೇರಣೆಗಳಾಗಬಲ್ಲ ಅಂಶಗಳಾಗಿವೆ.

ಈ ಹಿನ್ನೆಲೆಯಿರುವುದರಿಂದಲೇ ದಾಸ ಸಾಹಿತ್ಯವು ''ತಲ್ಲಣಿಸದಿರು ಕಂಡ್ಯ ತಾಳು ಮನವೇ'' (ಕನಕದಾಸ) ಎಂಬುದಾಗಿ ಸ್ವಂತದ ಸಂತೈಕೆಯಲ್ಲಿ ತೊಡಗುತ್ತದೆ. 'ಅಹಂ' ಅನ್ನುಗೆಲ್ಲಬೇಕಾ ಅಗತ್ಯವನ್ನು ಪ್ರತಿಪಾದಿಸುತ್ತದೆ. ಆದರೆ, ಈ ಸಾಂತ್ವನದ ಅನ್ವೇಷಣೆಯಲ್ಲಿ...

'ಏನು ಮಾಡಿದರೇನು ಹಿಂದಿನ ಕರ್ಮಫಲ

ತಾನು ಮಾಡಿದ ಕರ್ಮತನಗಲ್ಲದೆ'

(ಪುರಂದರದಾಸ)

ಎನ್ನುವ ಕರ್ಮ ಸಿದ್ಧಾಂತವನ್ನು - ಪ್ರಾಯಶಃ ಅನಿವಾರ್ಯವಾಗಿ ಅವಲಂಬಿಸಿತು. ಬದುಕಿನ

ರಹಸ್ಯಮಯತೆಯನ್ನು ಬಿಡಿಸಲಾರದ ಅಸಹಾಯಕತೆಯೇ ಈ ಪರಂಪಾರಗತ ಮೌಲ್ಯಗಳೊಂದಿಗೆ ರಾಜಿ ಮಾಡಿಕೊಳ್ಳಬೇಕಾದ ಪರಿಸ್ಥಿಯನ್ನು ದಾಸಸಾಹಿತ್ಯಕ್ಕೆ ತಂದುಕೊಟ್ಟಿದೆ. ''ವಿಧಿ ಬರೆದ ವಾಕು ಎಂದಿಗೂ ತಪ್ಪದು'' (ಪುರಂದರದಾಸ) ಎನ್ನುವ ಭರತ ವಾಕ್ಯದಲ್ಲಿ ಆ ಅನನ್ಯ ಶರಣಾಗಿಯು ಸ್ಪಷ್ಟವಾಗುತ್ತದೆ.

ಈ ಅಂಶಗಳಿಗೆ ಸರಿ ದೊರೆಯಾಗಿಯೇ ಮಿಥ್ಯಾ ಸಿದ್ಧಾಂತಗಳಿಗೆ ಜೋತು ಬಿದ್ದು, ಪಾಪ ಪ್ರಜ್ಞೆಯಿಂದ ಬಳಲುತ್ತಿದ್ದ ಜನರ ಸಂವೇದನೆಗಳಿಗೂ ದನಿ ನೀಡಲು ದಾಸ ಸಾಹಿತ್ಯವು ಉದ್ಯುಕ್ತವಾಯಿತು. ವಿಧವೆಯರ ಮೇಲೆ ಹೇರಲಾಗಿದ್ದ ನಿಯಮಾವಳಿಗಳ, ಸನ್ಯಾಸ ಪದ್ಧತಿಯ, ಸಾಮಾಜಿಕ ಅನಿಷ್ಟಗಳ, ಪುರುಷ ಪ್ರಾಧಾನ್ಯತೆಯ, ಸಮಾಜವನ್ನು ಎದುರಿಸಲಾರದ ಎದುರಿಸದೆ ಇರಲಾರದ ಇಬ್ಬಂದಿಗೆ ಸ್ಪಂದಿಸಿತು. ಸಾಮಾಜಿಕ ಒತ್ತಡಕ್ಕೆ ಈ ಮಾನಸಿಕ ಒತ್ತಡಗಳು ತಮ್ಮ ಕೊಡುಗೆಯನ್ನೂ ಸಲ್ಲಿಸಿದುವು.

ಈ ಎಲ್ಲಾ ವಿಧದ ಪ್ರೇರಣೆಗಳನ್ನೂ ಆಯಾ ಸಂದರ್ಭಗಳಲ್ಲಿ ಸ್ವೀಕರಿಸಿದ ಶ್ರೀಪಾದರಾಯ, ಪುರಂದರದಾಸ, ಕನಕದಾಸ, ವಾದಿರಾಜ, ವಿಜಯದಾಸ, ಜಗನ್ನಾಥದಾಸ ಮುಂತಾದವರು ಈ ಸಾಹಿತ್ಯ ಪರಂಪರೆಯ ಸರ್ವಾಂಗೀಣ ಬೆಳವಣಿಗೆಗೆ ಕಾರಣರಾದರು.

ಈ ಸಂದರ್ಭದಲ್ಲಿ ಎರಡು ಮುಖ್ಯ ಪ್ರಶ್ನೆಗಳು ಉಳಿದುಕೊಳ್ಳುತ್ತವೆ.

೧. ಈ ಪ್ರೇರಣೆಗಳಿಗೆ - ಕೆಲವೇ ಕೆಲವರನ್ನು ಹೊರತುಪಡಿಸಿ ಸಮಾಜದ ಉಚ್ಚವರ್ಗದವರೇ ಹೆಚ್ಚಾಗಿ ಪ್ರತಿಕ್ರಿಯಿಸಿದರೇಕೆ?

೨. ಮಹಿಳಾ ಪ್ರಾತಿನಿಧ್ಯ ಇಲ್ಲವೇ ಇಲ್ಲವೆನ್ನುವಷ್ಟು ಕಡಮೆಯಾಗಿರುವುದರ ಔಚಿತ್ಯವೇನಿರಬಹುದು?

ವಚನ ಸಾಹಿತ್ಯದ ಹಿನ್ನೆಲೆಯಲ್ಲಿ ಈ ಪ್ರಶ್ನೆಗಳಿಗೆ ಇನ್ನೂ ಹೆಚ್ಚಿನ ಮಹತ್ವವು ಬರುತ್ತದೆ. ಆ ಕಾಲದ ಸಾಮಾಜಿಕ ಸಾಂಸ್ಕೃತಿಕ ಚರಿತ್ರೆಯ ಆಳವಾದ ವಿಶ್ಲೇಷಣೆಯನ್ನು ನಿರೀಕ್ಷಿಸುವ ಈ ದಿಸೆಯ ಅಧ್ಯಯನಗಳಿಗೆ ವಿಪುಲವಾದ ಅವಕಾಶಗಳಿವೆ ಎನ್ನುವುದನ್ನು ಇವುಗಳು ಸೂಚಿಸುತ್ತವೆ.

ಕೃಪೆ : ದಾಸ ಸಾಹಿತ್ಯ : ಒಂದು ಪರಿಶೀಲನೆ

ಕೃತಿ ವಿಮರ್ಶೆ

# ಕನ್ನಡ ಕಾವ್ಯ ಮೀಮಾಂಸೆ;

## ಡಾ. ಎಸ್. ಎಂ. ಹಿರೇಮಠ

ಅಶ್ವಿನೀ ಪ್ರಕಾಶನ ಕುಲಬುರ್ಗಿ

VI + 174 ಬೆಲೆ ರೂ. 100

ಕನ್ನಡ ಕಾವ್ಯ ಮೀಮಾಂಸೆ ಡಾ. ಎಸ್. ಎಂ. ಹಿರೇಮಠ ಅವರ ಇತ್ತೀಚಿನ ಕೃತಿ. ಕನ್ನಡ ಕವಿಗಳ ಮೀಮಾಂಸಾ ಸ್ರೋತವನ್ನು, ಪ್ರಾಚೀನ ಕನ್ನಡ ಕಾವ್ಯದ ಅನನ್ಯತೆಯನ್ನು ಈ ಗ್ರಂಥ ಸಮರ್ಥವಾಗಿ ಎತ್ತಿ ಹಿಡಿದಿದೆ. ನಮ್ಮ ನಾಡಿನ ಕವಿಗಳು ಕಾವ್ಯ ಮೀಮಾಂಸೆಯನ್ನು ಕಟ್ಟಿ ಬೆಳೆಸಿದ ರೀತಿಯನ್ನು ಅರ್ಥಮಾಡಿಕೊಳ್ಳಲು ಈ ಕೃತಿ ಮಾರ್ಗದರ್ಶಿಯಾಗಿದೆ. ಪ್ರಾಚೀನ ಕನ್ನಡ ಕಾವ್ಯ ಪರಂಪರೆಯ ಜ್ಞಾನವನ್ನು ನಮಗೊದಗಿಸಿ, ಎಚ್ಚರಿಸುವ ಕಾರ್ಯವನ್ನು ಡಾ. ಹಿರೇಮಠ ಅವರು ಈ ಗ್ರಂಥದಲ್ಲಿ ಮಾಡಿದ್ದಾರೆ. ಆಧುನಿಕ ದೃಷ್ಟಿಕೋನ ಮತ್ತು ಪರಂಪರೆಗಳ ಮಧ್ಯದ ಕೊಂಡಿಯಾಗಿಯೂ ಈ ಕೃತಿ ಕಾಣಿಸಿಕೊಂಡಿದೆ.

ಸಂಸ್ಕೃತ ಕಾವ್ಯ ಮೀಮಾಂಸೆಯನ್ನು ಅನುಸರಿಸಿಯೂ ನಮ್ಮ ಕವಿಗಳು ಹೇಗೆ? ತಮ್ಮದೇ ಆದ ಮಾರ್ಗವನ್ನು ಕಂಡುಕೊಂಡರೆಂಬುದನ್ನು ವಿವರಿಸುವ ಈ ಕೃತಿಯಲ್ಲಿ ಹದಿನೇಳು ಚಿಕ್ಕ ಚಿಕ್ಕ ಅಧ್ಯಾಯಗಳಿವೆ. ಕಾವ್ಯದ ಸ್ವರೂಪ, ಕಾವ್ಯ ಕಾರಣ, ಕಾವ್ಯ ಪ್ರಯೋಜನ, ಅಲಂಕಾರ, ಗುಣ, ರೀತಿ, ರಸ, ಧ್ವನಿ, ಕಾವ್ಯ ಪ್ರಯೋಜನ, ಅಲಂಕಾರ, ಗುಣ, ರೀತಿ, ರಸ, ಧ್ವನಿ, ಕಾವ್ಯ ಪ್ರಭೇದಗಳು, ಸಹೃದಯ, ವಿಮರ್ಶಕ, ವಚನಕಾರರ ಕಾವ್ಯ ವಿಚಾರ, ಹೀಗೆ ಬೇರೆ ಬೇರೆ ನೆಲೆಯಲ್ಲಿ ಡಾ. ಹಿರೇಮಠರ ಬರವಣಿಗೆ ಸಂಶೋಧನೆಯಾಗಿ ಬಿಚ್ಚಿಕೊಳ್ಳುತ್ತಾ ವಿಮರ್ಶೆಯಾಗಿ ಬೆಳೆಯುತ್ತದೆ. ಪಂಪ, ರನ್ನ, ಹರಿಹರ, ರಾಘವಾಂಕ, ಜನ್ನ ಮೊದಲಾದ ಕವಿಗಳು ಬಿಡಿಬಿಡಿಯಾಗಿ ನಡೆಸಿರುವ ಕಾವ್ಯ ಚರ್ಚೆಯನ್ನು ಇಲ್ಲಿ ಕನ್ನಡ ಕಾವ್ಯ ಮೀಮಾಂಸೆಯ ಚೌಕಟ್ಟಿಗೆ ಅಳವಡಿಸಿರುವುದು ಈ ಕೃತಿಯ ಹೆಚ್ಚುಗಾರಿಕೆ.

ನಮ್ಮ ಕವಿಗಳು ಅನುಕರಣ ಶೀಲರಾದರೂ ತಮ್ಮ ಅನುಕರಣ ಕ್ರಿಯೆಗೆ ತಮ್ಮತನದ ಮುದ್ರೆಯನ್ನು ಒತ್ತಿದರು. ಬೇರೆಯವರದ್ದನ್ನು ಯಥಾವತ್ತಾಗಿ ಕಳವು ಮಾಡಿಕೊಂಡು, ತಮ್ಮದ್ದನ್ನಾಗಿಸಿಕೊಳ್ಳುವ ಕವಿಗಳನ್ನು ಕನ್ನಡ ಕವಿಗಳು ಎಂದೂ ಒಪ್ಪಿಕೊಂಡಿಲ್ಲ'' ಪರರೊಡವೆ.ಉ ಕೊಂಡು ಕೃತಿಯ ಪೇಳದ ಭಾಷೆ, ಪರರ ಕಾವಾರ್ಥಂಗಳಂ ಭಿದ್ರಿಸದ ಭಾಷೆ'' ಹಾಗಾಗಿ ಅಲ್ಲಿ ಹೊಸತನವಿದೆ. ಕನ್ನಡ ಕವಿಗಳು ಕಾವ್ಯಕ್ಕೆ ಪ್ರತಿಭೆಯು ಪ್ರಥಮಕಾರಣವೆಂದು ಒಪ್ಪಿಕೊಂಡಿದ್ದಾರೆ. ಅಷ್ಟಕ್ಕೆ ಅವರು ನಿಲ್ಲದೆ ಪ್ರತಿಭೆಯನ್ನು ಬೆಳೆಯಿಸಬಹುದಾದ ಏನೆಲ್ಲ ಆಕರ ಪರಿಕರಗಳ ಬಗ್ಗೆಯೂ ಆಲೋಚನೆ ಮಾಡಿದ್ದಾರೆ. ಕನ್ನಡದ ಕವಿಗಳು ಕೇವಲ ಕಾವ್ಯಾನಂದದ ಬೆನ್ನುಹತ್ತಿ ಬರೀ ಆದರ್ಶದಲ್ಲಿಯೇ ಮುಳುಗಿಹೋದವರಲ್ಲ. ಅವರಿಗೆ ವಾಸ್ತವತೆಯ ಗಾಢವಾದ ಅರಿವಿರುವುದರಿಂದ ಕಾವ್ಯದಿಂದ ಜೀವನೋಪಯೋಗಿಯಾದ ಇತರ ಪ್ರಯೋಜನ ಗಳನ್ನು ಬಯಸಿದ್ದಾರೆ, ಉಲ್ಲೇಖಿಸಿದ್ದಾರೆ. ಸಮಗ್ರ ಜೀವನದ ಪ್ರಗತಿಯಲ್ಲಿ ಕಾವ್ಯದ ಪಾಲೂ ಇದೆಯೆಂಬುದನ್ನು ಕವಿಗಳು ಇಲ್ಲಿ ಗುರಿತಿಸದೆ ಬಿಟ್ಟಿಲ್ಲ. ಆದುದರಿಂದ ಕನ್ನಡ ಕವಿಗಳು ಜನ ಸಮ್ಮುಖಿ, ಸಮಾಜ ಸಮ್ಮುಖಿಯಾದ ಕಾವ್ಯ ಕೃತಿಗಳನ್ನು ಬಯಸಿದ್ದಾರೆ, ಅಂತೆಯೇ ರಚಿಸಿ ಸಹೃದಯರಿಗೆ ಕೊಟ್ಟಿದ್ದಾರೆ. ಇಷ್ಟೆಲ್ಲ ಡಾ. ಹಿರೇಮಠರ ಗಂಭೀರ ಚಿಂತನಗಳಿಂದಾಗಿ ಅನೇಕ ಸತ್ಯಾಂಶಗಳು ಬಯಲಿಗೆ ಬಂದಿದೆ. ಲೇಖಕರ ವಿದ್ವತ್ತಿಗೆ, ಖಚಿತ ಶಾಸ್ತ್ರ ಜ್ಞಾನಕ್ಕೆ ಈ ಕೃತಿ ಸಾಕ್ಷಿಯಾಗಿದೆ.

ಇಂದು ಕನ್ನಡ ಕಾವ್ಯದ ಹಾದಿ ಬಹುದೂರ ಗತಿಸಿ ಬಂದಿದೆ. ವಚನಕಾರರ ಕಾಲದಲ್ಲಿ ಕೈತೊಳೆದುಕೊಂಡು ಮಡಿಯಿಂದ ಮುಟ್ಟಿಮನನಿಸಬೇಕಾದ ಕಾವ್ಯ ಎಂದು ಮುಟ್ಟಿ ಕೈ ತೊಳೆಯಬೇಕಾದ ಹಂತವು ತಲುಪುತ್ತಿರುವುದು ದುರಂತದ ಸಂಗತಿ. ವ್ಯಕ್ತಿತ್ವಕ್ಕೂ ಕಾವ್ಯಕ್ಕೂ ಮುಟ್ಟಲಾಗದ ಕಂದಕವು ತಲೆದೋರಿದೆ ಎಂಬುದನ್ನು ಖೇದದಿಂದ ದಾಖಲಿಸಿದ್ದಾರೆ. ಇದೊಂದು ಗರುಡ ಗಮನದ ಕೃತಿ. ಒಂದೂವರೆ ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ವಾಙ್ಮಯವನ್ನು ಇಲ್ಲಿ ಲೇಖಕರು ಸೂಕ್ಷ್ಮವಾಗಿ ಅವಲೋಕಿಸಿ ಕನ್ನಡ ಕಾವ್ಯದ ಗುಣ - ಲಕ್ಷಣ ವಿಶೇಷಗಳನ್ನು ಶೋಧಿಸಿಕೊಟ್ಟಿದ್ದಾರೆ. ಕನ್ನಡ ಸಾಹಿತ್ಯ ಪರಂಪರೆಯ ಸಂಸ್ಕೃತದ ಸಾಹಿತ್ಯ ಪರಂಪರೆಗಿಂತಲೂ ವಿಶಿಷ್ಟವಾಗುತ್ತ, ಕಾವ್ಯ ಮೀಮಾಂಸೆಯ ಎಷ್ಟೋ ವಿವರಗಳನ್ನು ತನ್ನಲ್ಲಿ ಅಂತರ್ಗತಗೊಳಿಸಿಕೊಳ್ಳುತ್ತಾ ಮುಂದುವರೆಯಿತು. ಆದುದರಿಂದ ಸಂಶೋಧಕರಿಗೆ, ಅಧ್ಯಯನಶೀಲರಿಗೆ ಕನ್ನಡ ಕಾವ್ಯ ಮಾರ್ಗದಲ್ಲಿ ಹಲವಾರು ಕಾವ್ಯ ಮೀಮಾಂಸೆಯ ವಿವರಗಳು ಎದುರಾಗುತ್ತವೆ. ಅವುಗಳನ್ನೆಲ್ಲವನ್ನು ಕ್ರೋಢೀಕರಿಸುವುದರ ಮೂಲಕವಾಗಿ ಸ್ಥೂಲವಾಗಿಯಾದರೂ ಕನ್ನಡ ಕಾವ್ಯ ಮೀಮಾಂಸೆಯ ಪಥವನ್ನು ರೂಪಿಸ ಬಹುದೆಂದು ಆಶಯವನ್ನು ಲೇಖಕರು ಆರಂಭದಲ್ಲೇ ವ್ಯಕ್ತ ಪಡಿಸಿದ್ದಾರೆ. ಕನ್ನಡ ಸಾಹಿತ್ಯ ಹಾಗೂ ಭಾಷೆಗಳ ಮೂಲಾಧಾರಗಳನ್ನು ಕಟ್ಟಲು ಇಂಥ ಕೃತಿಗಳು ನಮಗಿಂದು ಬೇಕಾಗಿದೆ.

(ಪುಟ 13ಕ್ಕೆ)

ಪ್ರತಿಕ್ರಿಯೆ

# ಜೀವನ ಪ್ರೀತಿಯ ಪಾಠ

''ತಾತ, ತಾತ, ಒಂದು ಕತೆ ಹೇಳ್ತೀಯಾ?'' ಎಂದು ಪೀಡಿಸುವ ಮಕ್ಕಳ ಬಳಿಗೆ ಬಂದು, ಮುಗುಳ್ನಕ್ಕು, ಕುಳಿತು, ಅತ್ಯಂತ ತಾಳ್ಮೆಯಿಂದ ಪಂಚತಂತ್ರದ ಕತೆಯನ್ನೋ ಇನ್ಯಾವುದೋ ಕತೆಯನ್ನೋ ಮನಮುಟ್ಟುವ ಹಾಗೆ ವಿವರವಾಗಿ ಬಣ್ಣಿಸಬಲ್ಲ ಬಿಳಿಗೂದಲಿನ ತಾತ ಯಾರಿಗೆ ತಾನೆ ಪರಿಚಿತರಲ್ಲ ಯಾರಿಗೆ ತಾನೆ ಪ್ರಿಯರಲ್ಲ ! ಕಿರಿಯರ ಮಾತು ಹಾಗಿರಲಿ, ಕತೆಯೆಂದಾಕ್ಷಣ ಪ್ರಪಂಚದ ಕೆಲಸಗಳನ್ನೆಲ್ಲ ಬಿಟ್ಟು ಕಿವಿ ನಿಮಿರಿಸುವ ಹಿರಿಯರಿಗೇನು ಬರಗಾಲವೇ? ನಮ್ಮೆಲ್ಲರೊಳಗೆ ಅಡಗಿಕೊಂಡು ಕಣ್ಣುಮುಚ್ಚಾಲೆಯಾಡುವ ಬಾಲ್ಯವನ್ನು ಹೊರತರುವ ಕತೆಗಳೆಂದರೆ ಎಲ್ಲರಿಗೂ ಕುತೂಹಲ, ಅಚ್ಚುಮೆಚ್ಚು.

ಕನ್ನಡ ಕಥಾಲೋಕದ ಮನೆಯಲ್ಲಿ ಈ 'ತಾತ' ಪಟ್ಟ ಮಾಸ್ತಿಯವರಿಗೇ ಮೀಸಲು. 'ಶ್ರೀನಿವಾಸ' ಕಾವ್ಯನಾಮದ ಮಾಸ್ತಿ ವೆಂಕಟೇಶ ಅಯ್ಯಂಗಾರರು ಹೊಸಗನ್ನಡದ ಸಾಹಿತ್ಯಾರಂಭದಲ್ಲಿ ಬರೆಯಲಾರಂಬಿಸಿ ೧೦೦ಕ್ಕೂ ಹೆಚ್ಚು ಕತೆಗಳನ್ನೂ ''ಮಾಸ್ತಿ ಕನ್ನಡದ ಆಸ್ತಿ'' ಎಂದೆ ನಾಡಿನ ಉದ್ದಗಲಕ್ಕೂ ಪ್ರಸಿದ್ಧರಾಗಿದ್ದಾರೆ. ವೈವಿಧ್ಯಮಯ ವಾದ ಕಥಾವಸ್ತು; ಜೀವನ ದರ್ಶನ; ತಿಳಿಹಾಸ - ಭರಿತ ಆತ್ಮೀಯ ಬರವಣಿಗೆಯ ಶೈಲಿ; ಸುತ್ತ ಮುತ್ತಲಿನ ಸಾಮಾನ್ಯ ಜನರಲ್ಲೂ ಹಿರಿಮೆ, ಘನತೆಗಳನ್ನು ಕಾಣುವ ದೊಡ್ಡ ಗುಣ; ಮಾನವೀಯ ಅಂತಃಕರಣ, ನಿರುದ್ವೇಗದ ಕಥನ - ಇವು ಮಾಸ್ತಿ ಕತೆಗಳ ಕೆಲವು ವೈಶಿಷ್ಟ್ಯಗಳು, ''ಸಿಂಹಾಲೋಕನ ದಿಂದ ತಾನು ಸ್ವಾನುಭವಕ್ಕೆ ತಂದುಕೊಂಡು ಹಾಗೆ ತಿಳಿಯಲಾರದ ಇತರರಿಗೆ ತಿಳಿಸತಕ್ಕದ್ದು'' ಎಂದು ಎಲ್.ಎಸ್.ಶೇಷಗಿರಿರಾಯರ ಬಣ್ಣಿಸುವ ಬರವಣಿಗೆಯಲ್ಲಿ ಕ್ಷುದ್ರತೆಗೆ ಎಡೆಯಿಲ್ಲ. ತಪ್ಪು-ಸರಿ ಎಂಬ ತೀರ್ಪುಗಳಿಲ್ಲ. ಬಾಳಲ್ಲಿ ಸುಖ - ದುಃಖ ಎರಡೂ ಇವೆ. ನಿಜ, ಹೀಗಿದ್ದೂ ಬಾಳು ಸ್ವೀಕಾರಾರ್ಹ ಎಂಬ ಸ್ವಸ್ಥ ಸಮಚಿತ್ತ ಇಲ್ಲಿದೆ. ಸಾಮಾನ್ಯವಾಗಿ ಮಾಸ್ತಿಯವರು ಕಥೆ ನಡೆದ ಕಾಲವನ್ನು ವರ್ತಮಾನದಿಂದ ದೂರ ನಿಲ್ಲಿಸುತ್ತಾರೆ. ಈ ''ದೂರದ ಅಂತರ '' ಅವರ ಕಥಾ ಸಾಗರಕ್ಕೆ ವಸ್ತು ನಿಷ್ಠತೆಯನ್ನು ನೀಡುತ್ತದೆ.

ಶ್ರೀನಿವಾಸರ ಮೊಟ್ಟ ಮೊದಲ ಕಥೆ ''ರಂಗನ ಮದುವೆ '' ಹಾಗೂ ಆನಂತರ ಬಂದ ''ರಂಗಪ್ಪನ ದೀಪಾವಳಿ'', ''ರಂಗಪ್ಪನ ಕೋರ್ಟ್‌ಷಿಪ್''ಗಳಲ್ಲಿ ಇಂದಿಗೆ ಸುಮಾರು ೬೦ ವರ್ಷಗಳ ಹಿಂದೆ ಇದ್ದ ಎಳೆಯರ ಪ್ರಪಂಚ, ಅದರಲ್ಲಿನ ಗಂಡು - ಹೆಣ್ಣು ಸಂಬಂಧಗಳು ಯಾವ ವಿಡಂಬನೆಯೂ ಇಲ್ಲದೆ, ಮುಗುಳ್ನಗು ತರಿಸುವಂತೆ ಚಿತ್ರಿತವಾಗಿದೆ. ''ಒಂದು ಹಳೆಯ ಕಥೆ'' ಮತ್ತು ''ಗೌತಮ ಹೇಳಿದ ಕಥೆ''ಯಲ್ಲಿನ ಪ್ರಮುಖ ಪಾತ್ರಗಳು ದೇಹದ ಬಯಕೆಯ ಅಗ್ನಿ ಪರೀಕ್ಷೆಯನ್ನೆದುರಿಸಿ ಗೆಲ್ಲುತ್ತವೆ. ''ಮೇಲೂರಿನ ಲಕ್ಷ್ಮಮ್ಮ'', ''ಕೃಷ್ಣಮೂರ್ತಿಯ ಹೆಂಡತಿ''ಯಲ್ಲಿ ಕಥೆಗಾರರು ಜೀವನದಲ್ಲಿನ ನೋವಿಗೆ ಸಹಾನುಭೂತಿಯಿಂದ ಮಿಡಿಯುತ್ತಾರೆ. ಆದರೆ ಯಾವ ಪರಿಹಾರವನ್ನೂ ಸೂಚಿಸುವುದಿಲ್ಲ. ''ನಮ್ಮ ಮೇಷ್ಟರು'' ಬಡ ಉಪಾಧ್ಯಾಯನೊಬ್ಬನ ಕೌಟುಂಬಿಕ ಜೀವನ ತುಣುಕನ್ನೂ, ಅವನ ಅಂತಃ ಕರಣದ ನೋವನ್ನು ಹಾಸ್ಯದ ಲೇಪದೊಂದಿಗೆ ಸಹೃದಯತೆಯಿಂದ ಮನನಾಟುವಂತೆ ಬಣ್ಣಿಸುತ್ತದೆ.

''ಮೊಸರಿನ ಮಂಗಮ್ಮ'', ''ಟಾಂಗಾ ಹುಸೇನ'' ಕಥೆಗಳಲ್ಲಿ ಮಾಸ್ತಿಯವರು ಸಾಮಾನ್ಯ ಅಂತಸ್ತಿನ ಜನರಲ್ಲೂ ಅಡಕವಾಗಿರುವ ಅಗಾಧವಾದ ಜೀವನಾನುಭವವನ್ನು ಅನಾವರಣಗೊಳಿಸುತ್ತಾರೆ. ''ಜೋಗ್ಯೋರ ಅಂಜಪ್ಪನ ಕೋಳೀ ಕಥೆ''ಯಲ್ಲಿಯೂ ಈ ಅಂಶ ಅತ್ಯಂತ ಸ್ವಾರಸ್ಯರತವಾಗಿ ಮೂಡಿಬಂದಿದೆ.

''ಜೋಗ್ಯೋರ...'' ಕಥೆಯಲ್ಲಿ ಹಳ್ಳಿಯ ಮನೆಮನೆಗೂ ಹೋಗಿ ದೇವರ ಹಾಡುಗಳನ್ನು ಹಾಡಿ,ಹಳ್ಳಿಗರ ಆದರಾತಿಥ್ಯವೊಂದರಿಂದಲೇ ಉದರಪೋಷಣೆಯನ್ನು ಮಾಡಿಕೊಳ್ಳಬೇಕಾದ ಜೋಗಪ್ಪನೊಬ್ಬನ ಜೀವನದ ಅನುಭವವಿದೆ. ಇಲ್ಲಿ ಕತೆ ಹೇಳುತ್ತಿರುವವನು ನಿರೂಪಕ; ಕತೆಯೊಳಗಿನ ಕೋಳಿಕತೆಯು ಘಟಿಸಿ ಸುಮಾರು 80 ವರ್ಷಗಳಾಗಿವೆ. ಮೊದಲು ಜೋಗಿ ಅಂಜಪ್ಪನ ವ್ಯಕ್ತಿ ಚಿತ್ರಣ; ಹೊಸತಾಗಿ ಬೆಂಚು ಮ್ಯಾಜಿಸ್ಟ್ರೇಟಾಗಿ ನೇಮಕಗೊಂಡಿರುವ ರಂಗಪ್ಪನ ಪರಿಚಯ ರಂಗಪ್ಪನಿಗೆ ಅಂಜಪ್ಪನಿಗೆ ಅಂಜಪ್ಪ ತನ್ನ ವಯೋಮಾನದ ಹಿರಿಮೆಯಿಂದಾಗಿ ನೀಡುವ ಬುದ್ಧಿವಾದ, ಆ ಮೂಲಕ ಅಂದಿನ ನ್ಯಾಯ ವ್ಯವಸ್ಥೆಯ ಸೂಕ್ಷ್ಮ ಪರಿಚಯ, ಇದಾದ ಮೇಲೆ ನಿರೂಪಕ ಹೇಳುವ ಕಥೆಯೊಳಗಿನ ಕೋಳಿ ಪ್ರಸಂಗ, ಅದರ ಮುಕ್ತಾಯದ ನಂತರ ಓದುಗರು ಮತ್ತೆ ನಿರೂಪಕ - ರಂಗಪ್ಪ - ಅಂಜಪ್ಪ ಇವರ ಕಾಲಕ್ಕೆ ಬರುತ್ತಾರೆ.

ವ್ಯಕ್ತಿ, ಕಾಲ ಮತ್ತು ಸ್ಥಳಗಳನ್ನು ಸಾಮಾನ್ಯ ಜೀವನಕ್ರಮದಿಂದ ಪ್ರತ್ಯೇಕ್ಷಿಸುವ ಕ್ರಿಯೆ ಪುರಾಣಗಳಲ್ಲಿ ನಡೆಯುತ್ತದೆಯಾದರೂ ಮಾಸ್ತಿಯವರು ಹೀಗೆ ಪ್ರತ್ಯೇಕಿಸಿದ ಕ್ರಿಯೆಯನ್ನು ಮತ್ತೆ ವರ್ತಮಾನಕ್ಕೆ ತರುವುದರ ಮೂಲಕ ಜಾನಪದದ ವೈಶಿಷ್ಟ್ಯವನ್ನು ಬಳಸಿಕೊಂಡಿದ್ದಾರೆಂದು ಡಾ. ಪುರುಷೋತ್ತಮ ಬಿಳಿಮಲೆಯವರು ತಮ್ಮ 'ಶಿಷ್ಟ ಪರಿಶಿಷ್ಟ' ಗ್ರಂಥದಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಮಾಸ್ತಿಯವರ ಜಾನಪದ ಅಧ್ಯಯನ ಅವರ ಜೀವನ ಪ್ರೀತಿಯ ದ್ಯೋತಕವಾಗಿದೆ. ಪ್ರಸ್ತುತ ಕಥೆಯಲ್ಲಿ ಬಾಂಧವ್ಯದ ಸಂಕೇತವಾದ ಎಲೆ ಅಡಿಕೆಯ ಸೇವನೆಯಿಂದ ಬಿಚ್ಚಿಕೊಳ್ಳುವ ಕಥೆ ಎಲೆಯಡಿಕೆಯ ಕೊಡುಕೊಳ್ಳುವಿಕೆಯ ಮೂಲಕ ಮುಗಿಯುತ್ತದೆ. ವಯಸ್ಸಿನಲ್ಲಿ, ಅನುಭವದಲ್ಲಿ ಹಿರಿಯನಾದ ಅಂಜಪ್ಪನಿಂದ ಬುದ್ಧಿವಾದದ ಮಾತುಗಳನ್ನು ಸ್ವೀಕರಿಸುವಲ್ಲಿ ರಂಗಪ್ಪನಿಗೆ ಯಾವ ತಕರಾರೂ ಇಲ್ಲ.

ಜೋಗಿ ಅಂಜಪ್ಪನ ಪಾತ್ರ ಚಿತ್ರಣ, ಆತನ ವೃತ್ತಿಯ ಮೇಲಿನ ಅಭಿಮಾನ, ಎದುರಿಸಲೇಬೇಕಾದ ತೊಡಕುಗಳು, ಬೆಳ್ಳಗಿರುವುದೆಲ್ಲ ಹಾಲೆಂದು ನಂಬುವ ಮುಗ್ಧ ಸ್ವಭಾವ, ಮಾಲು ಸಮೇತ ಸಿಕ್ಕಿ ಬಿದ್ದು ಪೇಚಿಗೆ ಸಿಲುಕಿಕೊಂಡಾಗಲೂ ತಾನು ಮೋಸ ಹೋದೆ ಎಂದು ತಿಳಿದ ಸ್ಫುಟಗೊಳ್ಳುವ ಆತನ ಅಂತಃಕರಣ, ಈ ಮೂಲಕ ಆತನ ಲೋಕಾನುಭವವನ್ನು ಮಾಸ್ತಿಯವರು ತುಂಬಾ ರಸವತ್ತಾಗಿ ಓದುಗರ ಮುಂದೆ ತೆರೆದಿಡುತ್ತಾರೆ. ಎಲ್ಲ ವಿವರಗಳ ನಡುವೆ ಮಾಸ್ತಿಯವರು ನೇಯುವ ತಿಳಿಹಾಸ್ಯದ ಎಳೆಯಂತೂ ಕಥೆಯ ಸೊಬಗನ್ನು ಇನ್ನಷ್ಟು ಹೆಚ್ಚಿಸುತ್ತದೆ.

ಹೀಗೆ ಅತಿ ಸಮಾನ್ಯವಾದ ಸಂಗತಿಯೊಂದನ್ನು ಕಲಾತ್ಮಕವಾಗಿ ಹೇಳುವುದರ ಮೂಲಕ ಜೀವನ ಪ್ರೀತಿಯ ಪಾಠವನ್ನು ಓದುಗರಿಗೆ ಕಲಿಸುವ ಮಾಸ್ತಿ ತಾತ ನಮ್ಮೆಲ್ಲರ ಗೌರವಕ್ಕೆ ಪಾತ್ರರಾಗುತ್ತಾರೆ ಇಂಥ ಒಂದು ಉತ್ತಮ ಕತೆಯನ್ನು ಪ್ರಕಟಿಸಿದ 'ನೇಸರು'ವಿಗೆ ನನ್ನ ನೆನಕೆಗಳು ಸಲ್ಲುತ್ತವೆ

-- ಅಹಲ್ಯಾ ಬಲ್ಲಾಳ

# SHRADDHA- A LAUDABLE EFFORT

The Mumbai Branch of All India Women's conference (AIWC), in collaboration with SOS Children's Villages Maharashtra started a project called 'Shraddha' on 2nd October 1996 to help and rehabiliate the street children. Our member, late Smt. Usha Jairam was one of the active forces behind this project.

Shraddha centre initially started its activities on platform No. 5 of Khar station and after that at Madhu Park in Khar. However, soon they were able to get the Education Department of BMC to allow them to use a room in the Municipal School at Khar for Shraddha's activities. The children who came to Shraddha are those who literally live on the streets or the hut by the road side/ railway tracks. They are victims of neglect, as their parents need to go out and earn a living. Aho, stark poverty leads to constant quarrels in the family and exploitation of children by the antisocial elements. In order to prevent this and provide a better opportunity for their children, Shraddha is working.

About 30 children come to Shraddha. They are aged 5-14 years. Apart from formal education, they are given non-formal education and allowed to learn vocational skills. Shraddha is a day care centre where those children feel safe, learn the activities normal to the children such as play, attend school etc. and get a lot of attention and care, which they lack at their homes. Shraddha does not stop at that, it gradually builds in these children good value system, provides them healthy and hygienic food and arranges regular medical check up etc. Shraddha is manned by professionally trained social workers. A typical day at Shraddha is as under:

| | | |
|---|---|---|
| 10.00 to 11.00 a.m. | - | Assembly and Cleanliness of Centre |
| 11.00 to 11.45 a.m. | - | Prayer, Yoga & Exercise |
| 11.45 to 12.00 noon | - | Snacks |
| 12.00 noon to 12.15 p.m. | - | Medicare |
| 12.15 to 12.30 p.m. | - | School Children to Dress in Uniform |
| 12.30 to 1.00 p.m. | - | Lunch & off to School |
| 01.00 to 3.00 p.m. | - | Attending School |
| 03.00 to 4.00 p.m. | - | Games/Poetry/Singing/Stories/Cleaning & Washing own cloths |
| 04.00 to 5.00 p.m. | - | Counselling, Homework, Study time vocational training etc. |
| 5.00 to 5.30 p.m. | - | Snacks & Milk and then off to meet the parents. |

Vocational training for younger children includes making Agarbattis, Soaps, Candles etc. Where as the bigger children are taught or sent to Industrial Training Institutes, Car driving, Wiring, Mechanics, Tailoring, assisting in beauty parlours etc. The children are given identity cards, which builds up their self- esteem and also helps them in emergencies.

Till date, over 150 children have benefited includes from Shraddha. Running a Centre like Shraddha needs money. More than money, it needs volunteers who are willing to devote their time and energy to these unfortunate children. They need to genuinely share their affection and love with these children, which results in the children feeling that they too are loved and cared for. This feeling awakens in the children the desire to learn, do well and excell in all fields.

The Mysore Association has established about two years ago, a scholarship in the memory of Smt. Usha Jairam and gives every year Rs. 5,000/- towards the educational expenses of Shraddha. Many of our members and well wishers who read Nesaru would be interested in helping this noble cause, either through donations/sponsorships. Such members may contact the Association's office for details.

# "SHRADDHA" - MY IMPRESSIONS

**- Smt. Bharathi Prasad**

"Shraddha", the name itself indicates dedication and commitment. Shraddha is street children's project of the Mumbai branch of AIWC. It us earnest effort to provide a good atmosphere for growth and development of underprivileged children. The children who come to Shraddha are all from the Jhopadpattis near Khar railway station. Some of them literally live on the railway platform. The atmosphere they come from is totally different from that of the children we normally know. Day in and day out they see so much of fighting among their parents and neighbours, which is largely due to poverty, drunkenness, etc.

It is now three years since I am associated with Shraddha. I was asked to teach some Bhajans to these children. The first day, when I went to Shraddha, the children greeted me with a good smile and aloud "Namaste Didi". I asked them to introduce themselves and told them that I would be teaching them bhajans once a week. Initially they showed no interest, as the influences of film songs were more on them. It was not their fault. Because, parents- especially the mother, plays an important role in a child's life. In case of these children, the mother is so preoccupied with her own problems of making the both ends meet, taking care of her family, that she hardly finds time to teach her children about the basic values of life. I noticed that more than any thing these children needed lot of love and affection and individual care.

I continued going to Shraddha once a week. It took me some time to make them understand what is prayer and why we should do it. It was very difficult to make them sit at one place, make them realize that they should live together with other children by learning to share, adjust and co-operate. Apart from the love and affection, they needed individual attention, which they lacked at home. As mentioned earlier, their parents hardly spent any time with them or taught them

anything. The children would some times throw tantrums, become moody and stubborn. It would then become necessary to bring them all into a good mood by taking a break from bhajans and playing some group games or "Antakshari" with them. Once they were back in a good mood, we would continue the bhajans again. We as social workers should have a lot of patience and good tactics to deal with such children. I really admire Sri. Pravin, Sri. Srinivas and Ms. Archana for the way in which they handle these children with so much of love & affection and have at the same time taught them such a good discipline too, Hats off to them.

Whether it was singing, dancing, acting or drawing sketches, it was amazing to see these children having so much of hidden talent. It only shows that, given a suitable opportunity and encouragement, hidden talents can blossom in every individual. As social worker, our effort should be to see their hidden talents are brought out and build confidence in them. This can be done only through close interaction, lot of love for the children and patience to put up with their moods and tantrums. The satisfaction you get when you see a child blossom is so immense that all efforts that may be required by you appear to be small in comparison.

An activity like Shraddha requires money, no doubt. There are many philanthropic people who support such activities. More importantly.. I feel that it requires committed social workers who can give their time and energy to this project. They will need to share their love and affection with these unfortunate children, make them feel wanted and loved so that they will develop greater self worth, greater self confidence and belief in the value system of a good society. Only that can make these children become a part of the mainstream of our society.

Let us all get together and make projects like Shraddha a great success.

●

# THE STREET CHILDREN & THE ROLE OF NGO'S

- SMT. TARA SAHA

The words "Street Children" conjure up before our the picture of half-naked hungry looking children, begging or playing in dirt. So many questions before our eyes. Whose children are these? Haven't they got homes? is there any one to give them love and shelter? What is their future? Expecting for the last question, the answer can be obtained if we talk to these kids. The most difficults anb pointed question is who can visualize their future?

These children are part of a society, which has lost sensibility towards the well being of their future citizens. They live on streets or hovels worst than doghouses. They don't know the meaning of words like parental love. They have to fend for themselves for their basic needs like food and shelter. Unscrupulous people take advantage of their vulnerability and tempt them into crime and drugs. The so-called elite and educated section of our society blame these children and even hate them. What is the way out of this situation?

Today many NGO's like our 'Shraddha' are trying their level best in their limited way to tackle this gigantic problem. It arises out of poverty, whose biggest victims are always women and children. These women and young girls who have to live on streets are forced into situations where men take advantage and then desert them. The mothers are not able to bring up their children properly, in spite of all their efforts and wishes. So the priority today is to find work for these mothers, so that they can look after their children. Once the family begins to stay together, emotins develop and the children also begin to feel secure. This feeling of security encourages these children to learn good habits and the desire to live well like other children. The NGO's working for these children have to develop a two pronged strategy-try to tackle the mothers and also work for the educational development of the children. This is not a small or easy job. It needs many devoted social workers, funds to set up the infrastructure, as well as funds to help those in need besides a broad vision to encompass various sections of our society.

This colossal problem involving thousands of children in our country can not be ignored by women's organizations. These organizations like All India Women's Conference, SEWA and so many others should pool their resources and chalk out a detailed programme to work for these street children. They will need hostel, which will provide simple amenities of life, teach human values, and bind them into disciplined band of human beings. There will have to be training centres for the mothers to teach them skills and make them stand on their own, so that they can take back their to form happy family life. They can live with self-confidence and self-respect.

The united efforts of these organizations can bring back the lost childhood of these unfortunate little boys and girls. It is a known fact that the government run homes for children are nothing more than prisons. Hence it becomes the duty and the responsibility of all of us to take up this activity with full concentration.

---

ಕೃತಿ ವಿಮರ್ಶೆ

*(ಪುಟ 10ರಿಂದ)*

ಕನ್ನಡ ಕಾವ್ಯ ರಚನೆಯಲ್ಲಿ ತೊಡಗಿಕೊಳ್ಳುವವರಿಗೆ, ಕನ್ನಡ ಭಾಷೆ, ಸಾಹಿತ್ಯಗಳ ಪ್ರೌಢ ವಿದ್ಯಾರ್ಥಿಗಳಿಗೆ, ವಿದ್ವಾಂಸರಿಗೆ ಸಮಾನವಾಗಿ ಬೇಕಾಗಿರುವ ಕೃತಿಯಿದು. ಇಲ್ಲಿಯ ನಿರೂಪಣೆ ಶಾಸ್ತ್ರೀಯವಾಗಿದ್ದರೂ ಎಲ್ಲಿಯೂ ಶುಷ್ಕವಾಗಿಲ್ಲ. ಕೃತಿಗೆ ಸೂಕ್ತ ಮುಕ್ತಾಯವೂ ಇದೆ. ಒಟ್ಟಿನಲ್ಲಿ ಕನ್ನಡ ಕಾವ್ಯ ಮೀಮಾಂಸೆ ನಡೆದು ಬಂದ ದಾರಿಯತ್ತ, ಅದರ ಹೆಜ್ಜೆ ಹಾದಿಗಳತ್ತ ಲೇಖಕರು ನಮ್ಮ ಗಮನ ಸೆಳೆದಿದ್ದಾರೆ. ಇದೊಂದು ಶ್ಲಾಘನೀಯ ಪ್ರಯತ್ನ ಕನ್ನಡ ಕಾವ್ಯ ಮೀಮಾಂಸೆಯ ಬಗೆಗಿನ ವಿಚಾರಗಳನ್ನು ಕಲೆಹಾಕಿದ ಹಾಗೂ ಕಾಳಜಿ ವಹಿಸಿದ ಬಗೆಗೆ ಡಾ. ಹಿರೇಮಠ ಅವರನ್ನು ನಾವಿಲ್ಲಿ ಅಭಿನಂದಿಸಲೇಬೇಕು. ಕನ್ನಡ ಕಾವ್ಯ ಮೀಮಾಂಸೆ ಒಂದು ಉಪಯುಕ್ತ ಹಾಗೂ ಅತ್ಯುತ್ತಮ ಕೃತಿ. ಕನ್ನಡ ಅಧ್ಯಯನದ ವೈಚಾರಿಕ ವಿಕಾಸಕ್ಕೆ ಇದು ಪೂರಕವಾಗಿದೆ. ನಮ್ಮದೇ ಆದ ಸಾಹಿತ್ಯದ ಮಾನದಂಡದ ಹುಡುಕಾಟವೂ ಇಲ್ಲಿದೆ. ''ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆ, ನಿಂದ ಹೆಜ್ಜೆಯನರಿಯಲಾಗದು'' ಎಂಬ ಅಲ್ಲಮ ಪ್ರಭುವಿನ ಮಾತು ವರ್ತಮಾನದ ಅರಿವಿಗೆ ಪೂರ್ವಸ್ಮೃತಿಯ ಅವಶ್ಯಕತೆ ಎಷ್ಟೆಂಬುದನ್ನು ಮಾರ್ಮಿಕವಾಗಿ ತಿಳಿಸುತ್ತದೆ. ಈ ನಿಟ್ಟಿನಿಂದಲೂ ಪ್ರಸ್ತುತ ಕೃತಿಗೆ ವಿಶೇಷ ನೆಲೆಬೆಲೆಯಿದೆ.

-- ಡಾ. ಜಿ. ಎನ್. ಉಪಾಧ್ಯ

# ಸುತ್ತಮುತ್ತ

## ಪ್ರಾದೇಶಿಕ ಗಡಿಗಳನ್ನು ಮರೆತು ಮೊದಲು ಭಾರತೀಯರಾಗೋಣ -- ಎಂ. ವಿ. ಕಾಮತ್

ಭಾರತೀಯರನ್ನು ಒಂದು ಭಾಷೆಗೆ ಸೀಮಿತಗೊಳಿಸುವ ಹಾಗಿಲ್ಲ. ನಾವು ಬಹುಭಾಷೆ, ಬಹು ಸಂಸ್ಕೃತಿಯನ್ನು ಹೊಂದಿದ ಪ್ರಾದೇಶಿಕ ಗಡಿಗಳನ್ನು ಮರೆತು ಮೊದಲು ಭಾರತೀಯರಾಗೋಣವೆಂದು ಖ್ಯಾತ ಪತ್ರಕರ್ತ ಎಂ.ವಿ. ಕಾಮತ್ ಇತ್ತೀಚೆಗೆ ನಡೆದ ಕರ್ನಾಟಕ ಸಂಘದ ವರದರಾಜ ಆದ್ಯ ಪ್ರಶಸ್ತಿ ಪ್ರಧಾನ ಸಮಾರಂಭದ ಮುಖ್ಯ ಅತಿಥಿಯ ಸ್ಥಾನದಿಂದ ಮಾತನಾಡುತ್ತಿದ್ದರು. ಶ್ರೀಯುತರು ಮುಂದುವರಿಯುತ್ತಾ ಕಲೆ ಮತ್ತು ಕಲಾಕಾರರಿಗೆ ಜಾತಿಯ ಬಂಧನವಿಲ್ಲ. ಎಲ್ಲಾ ಜಾತಿ, ಮತ, ಭಾಷೆಯ ಜನರನ್ನು ಕಲೆಯ ಒಂದುಗೂಡಿಸುತ್ತದೆ. ವರದರಾಜ ಆದ್ಯರು ಕನ್ನಡಿಗರಾದರೂ ಮೊದಲು ಭಾರತೀಯರಾದ ಕಾರಣ ಮರಾಠಿ ಕನ್ನಡ ಭಾಷಾ ಬಾಂಧವ್ಯಕ್ಕೆ ಹೆಚ್ಚಿನ ಮಹತ್ವ ನೀಡಿದರು ಎಂದು ಎಂ. ವಿ. ಕಾಮತ್ ತಿಳಿಸಿದರು.

ಪ್ರಸ್ತುತ ಸಾಲಿನಲ್ಲಿ ಬಂದ ಒಟ್ಟು 27 ಅಭ್ಯರ್ಥಿಗಳಲ್ಲಿ ಶ್ರೀ ವಿಜಯಫತರ್ಪೇಕರ್ ಮತ್ತು ಸಂಸ್ಥೆ 'ನಿಶಿಗಂಧ' ನಾಟ್ಯ ಮಂದಿರ'ವನ್ನು ನಿರ್ಣಾಯಕರಾದ ಪ್ರೊ. ಪುಷ್ಪಭಾವೆ, ಮಾಜಿ ಮರಾಠಿ ವಿಭಾಗದ ಮುಖ್ಯಸ್ಥೆ ರುಯ್ಯಾ ಕಾಲೇಜ್ ಹಾಗೂ ಡಾ. ವ್ಯಾಸರಾವ್ ನಿಂಜೂರ್, ಖ್ಯಾತ ಕನ್ನಡ ಲೇಖಕ ಇವರು ಆಯ್ಕೆ ಮಾಡಿದರು.

ವಿಜಯ ಫತರ್ಪೇಕರ್ ಮತ್ತು 'ನಿಶಿಗಂಧ ನಾಟ್ಯ ಮಂದಿರ' ಸಂಸ್ಥೆಯ ಅಧ್ಯಕ್ಷ ಅರುಣ ಮಹ್ರಾರಿಗೆ ಎಂ. ವಿ. ಕಾಮತರು ಶಾಲು ಹೊದಿಸಿ ಪ್ರಶಸ್ತಿ ಪತ್ರ ನೀಡಿ ಸನ್ಮಾನಿಸಿದರು. ವಿಜಯ ಫತರ್ಪೇಕರ್ ಸಾವಂತವಾಡಿ ಕಾಲೇಜಿನಲ್ಲಿ ವಿಜ್ಞಾನದ ವಿಭಾಗದಲ್ಲಿ ದುಡಿಯುತ್ತಿದ್ದು ಜಾನಪದ ಕಲೆಯಲ್ಲಿ ಹೆಚ್ಚಿನ ಆಸಕ್ತಿ ಇಟ್ಟವರು. ತನ್ನದೇ ತಂಡವನ್ನು ನಿರ್ಮಿಸಿ ಮಹಾರಾಷ್ಟ್ರದ ಜಾನಪದ ಕಲೆ 'ದಶಾವತಾರಿ'ಯ ಜೊತೆ ಕರ್ನಾಟಕದ ಯಕ್ಷಗಾನವನ್ನು ಮೇಳೈಸಿ ಹಲವಾರು ಪ್ರಯೋಗಗಳನ್ನು ನಡೆಸಿ ಮಹಾರಾಷ್ಟ್ರದ ಜನತೆಗೆ ಯಕ್ಷಗಾನವನ್ನು ಪರಿಚಯಿಸುವ ನಿಟ್ಟಿನಲ್ಲಿ ಯಶಸ್ವಿಯಾಗಿದ್ದಾರೆ. ''ಶಿವರಾಮ ಕಾರಂತರ ಮಾರ್ಗದರ್ಶನದಲ್ಲಿ ಯಕ್ಷಗಾನವನ್ನು ಕಲಿಯುವ ಸೌಭಾಗ್ಯವು ನನಗೆ ದೊರೆತಿದೆ'' ಎಂದು ಹೆಮ್ಮೆಯಿಂದ ಫತರ್ಪೇಕರ್ ತಮ್ಮ ಅನಿಸಿಕೆಗಳನ್ನು ಹೇಳುತ್ತಾ ಇದು ಆರಂಭಮಾತ್ರ ಇನ್ನೂ ಈ ಕ್ಷೇತ್ರದಲ್ಲಿ ನನಗೆ ಹಲವಾರು ಪ್ರಯೋಗಗಳನ್ನು ಮಾಡಲಿಕ್ಕಿದೆ ವರದರಾಜ ಪ್ರಶಸ್ತಿ ನೀಡಿ ಸನ್ಮಾನ ಮಾಡಿದ ಕರ್ನಾಟಕ ಸಂಘಕ್ಕೆ ನಾನು ಆಭಾರಿಯಾಗಿದ್ದೇನೆ'' ಎಂದು ತಿಳಿಸಿದರು.

''ನಿಶಿಗಂಧ ನಾಟ್ಯ ಮಂದಿರ''ದ ಪರವಾಗಿ ಅರುಣ ಮಹ್ರಾರವರು ''ಸಂಸ್ಥೆಗೆ ನೀಡಿದ ಈ ಗೌರವವು ನನ್ನ ಜೀವನದ ಒಂದು ಅವಿಸ್ಮರಣೀಯ ಸಂಗತಿ. ಕರ್ನಾಟಕ, ಕನ್ನಡ ಭಾಷೆಯ ಬಗ್ಗೆ ಹೆಚ್ಚಿನ ಒಲವು ನನಗೆ, ಕರ್ನಾಟಕಕ್ಕೆ ಹೋಗುವ ಸಂದರ್ಭ ದೊರೆತರೆ ಅಲ್ಲಿಯ ಗಣ್ಯವ್ಯಕ್ತಿಗಳ ಭೇಟಿ ಮಾಡುತ್ತೇನೆ. ಅವರೆಲ್ಲರ ಪ್ರೀತಿ ವಿಶ್ವಾಸವೇ ನನ್ನ ಕಾರ್ಯಕ್ಕೆ ಸ್ಫೂರ್ತಿಯ ನೆಲೆ'' ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರರು ನಮ್ಮ ನಾಟಕಗಳನ್ನು ಮರಾಠಿಗೆ ಅನುವಾದಿಸಿ ಯಶಸ್ವಿಯಾಗಿ ಪ್ರದರ್ಶಿಸುವುದೇ ನಮ್ಮ ಮಾನಧನವೆಂದು ನನ್ನನ್ನು ಆಶೀರ್ವದಿಸಿದ್ದಾರೆ ಎಂದು ಭಾವುಕತೆಯಿಂದ ತಿಳಿಸಿದರು.

ಕರ್ನಾಟಕ ಸಂಘದ ಅಧ್ಯಕ್ಷ ಕೆ. ಜಯರಾಮ ಆಳ್ವರು ಸ್ವಾಗತಿಸಿದರು. ಅವರು ತಮ್ಮ ಭಾಷಣದಲ್ಲಿ ಕನ್ನಡ ಮರಾಠಿ ಜನರ ಭಾಷಾ ಬಾಂಧವ್ಯ ಹಾಗೂ ಸೌಹಾರ್ದತೆ ಹೆಚ್ಚಿಸುವುದೇ ಈ ಪ್ರಶಸ್ತಿಯ ಮುಖ್ಯ ಉದ್ದೇಶ. ಅದೇ ವರದರಾಜ ಆದ್ಯರ ಕನಸೂ ಆಗಿತ್ತು ಎಂದು ತಿಳಿಸಿದರು.

ಕಾರ್ಯಕ್ರಮಕ್ಕೆ ದಿ। ವರದರಾಜ ಆದ್ಯರ ಪತ್ನಿ ಶ್ರೀಮತಿ ಇಂದುಮತಿ ಆದ್ಯರೂ ಉಪಸ್ಥಿತರಿದ್ದರು. ಗೌ. ಪ್ರ. ಕಾರ್ಯದರ್ಶಿ ಶ್ರೀ ರವಿ. ರಾ. ಅಂಚನ್‌ರವರು ಮುಖ್ಯ ಅತಿಥಿಯವರನ್ನು ಪರಿಚಯಿಸಿದರು. ಬಹುಮಾನ ವಿಜೇತರ ಪರಿಚಯ ಹಾಗೂ ಕಾರ್ಯಕ್ರಮದ ನಿರ್ವಹಣೆಯನ್ನು ಶ್ರೀ ಪ್ರಕಾಶ್ ಬುರ್ಡೆಯವರು ಮಾಡಿದರು.

ಭರತ್ ಕುಮಾರ್ ಪೊಲಿಪು ಕೊನೆಗೆ ವಂದಿಸಿದರು.

ಕಾರ್ಯಕ್ರಮದ ಅಂಗವಾಗಿ ಕನ್ನಡ ಚಲನಚಿತ್ರ ''ಭೂಮಿ ತಾಯಿಯ ಚೊಚ್ಚಲ ಮಗ'' ಕನ್ನಡ ಚಲನ ಚಿತ್ರವನ್ನು ಪ್ರದರ್ಶಿಸಲಾಯ್ತು.

## ಇಂಟರ್‌ನೆಟ್‌ನಲ್ಲಿ ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯದ ಮಾಹಿತಿ ಲಭ್ಯ

ದೇಶದ ಪ್ರಾಚೀನ ವಿಶ್ವವಿದ್ಯಾಲಯಗಳಲ್ಲಿ ಒಂದೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಮುಂಬಯಿ ವಿಶ್ವವಿದ್ಯಾಲಯವು ಇತ್ತೀಚೆಗೆ ವೆಬ್‌ಸೈಟ್ ಒಂದನ್ನು ಸ್ಥಾಪಿಸಿದ್ದು ಕನ್ನಡ ವಿಭಾಗವೂ ಸೇರಿದಂತೆ ವಿಶ್ವವಿದ್ಯಾಲಯದ ಯಾವುದೇ ಮಾಹಿತಿಯನ್ನು ಜಾಗತಿಕ ಮಟ್ಟದಲ್ಲಿ ಪಡೆದುಕೊಳ್ಳಲು ಸಾಧ್ಯವಾಗಿದೆ.

ಕನ್ನಡ ವಿಭಾಗಕ್ಕೆ ಸಂಬಂಧಿಸಿದಂತೆ ಎಂ. ಎ., ಎಂ.ಫಿಲ್., ಪಿ.ಎಚ್.ಡಿ., ಡಿಪ್ಲೋಮಾ, ಸರ್ಟಿಫಿಕೇಟ್ ತರಗತಿಗಳ ಮಾಹಿತಿಗಳು ಈ ವೆಬ್‌ಸೈಟ್‌ನಲ್ಲಿ ಲಭ್ಯವಿದೆ. ವೆಬ್‌ಸೈಟ್‌ನ ವಿಳಾಸ ಈ ಕೆಳಗಿನಂತಿದೆ. www.mu.ac.in\

ಇದಲ್ಲದೆ ವಿಶ್ವವಿದ್ಯಾಲಯದ ಇನ್ನಿತರ ವಿಭಾಗಗಳ ಎಲ್ಲಾ ಮಾಹಿತಿಗಳೂ ಇಲ್ಲಿ ದಾಖಲಾಗಿದ್ದು ವಿದ್ಯಾರ್ಥಿಗಳು ಪರೀಕ್ಷಾ ಫಲಿತಾಂಶಗಳನ್ನು ಸಹ ಈಗ ಇಂಟರ್‌ನೆಟ್ ಮುಖಾಂತರವಾಗಿ ಪಡೆದುಕೊಳ್ಳಬಹುದಾಗಿದೆ. ಈ ಕುರಿತಾದ ಹೆಚ್ಚಿನ ಮಾಹಿತಿಯನ್ನು ವಿಭಾಗದ ಕಛೇರಿಯಿಂದ ಪಡೆದುಕೊಳ್ಳಬಹುದೆಂದು ಕನ್ನಡ ವಿಭಾಗದ ಪ್ರಕಟಣೆಯು ತಿಳಿಸಿದೆ.

## ಡಾ. ತಾಳ್ತಜೆ ಅವರ ಮೂರು ಕೃತಿಗಳ ಬಿಡುಗಡೆ

ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯದ ಮುಖ್ಯಸ್ಥರೂ ಹಾಗೂ ಪ್ರಾಧ್ಯಾಪಕರೂ ಆಗಿರುವ ಡಾ. ತಾಳ್ತಜೆ ವಸಂತಕುಮಾರ ಅವರು ಬರೆದ ಮೂರು ಕೃತಿಗಳನ್ನು ಇತ್ತೀಚೆಗೆ ನಾಡಿನ ಬೇರೆಬೇರೆ ಕಡೆಗಳಲ್ಲಿ ಬಿಡುಗಡೆಗೊಳಿಸಲಾಯಿತು.

''ರಂ. ಶ್ರೀ ಮುಗಳಿ'' ಬದುಕು, ಬರಹಗಳನ್ನು ಬಿಂಬಿಸುವ ಕೃತಿಯನ್ನು ಬೆಂಗಳೂರಿನ ನವಕರ್ನಾಟಕ ಪ್ರಕಾಶನವು ಇತ್ತೀಚೆಗೆ ಹೊರತಂದಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತರ ಮಾಲಿಕೆಯಲ್ಲಿ ಈ ಕೃತಿ ಪ್ರಕಟವಾಗಿದ್ದು ಇದನ್ನು ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಂ.ಎಂ. ಕಲಬುರ್ಗಿ ಅವರು ಇತ್ತೀಚೆಗೆ ಬೆಂಗಳೂರಿನಲ್ಲಿ ಬಿಡುಗಡೆಗೊಳಿಸಿದರು.

''ಕನ್ನಡ ಶಬ್ದಾರ್ಥ ಮೀಮಾಂಸೆ'' ಎಂಬ ಹೊತ್ತಿಗೆಯು ಕರ್ನಾಟಕ ವಿಶ್ವವಿದ್ಯಾಲಯದ ಶಿ.ಶಿ. ಬಸವನಾಳ ಮೂಲಭೂತ ಉಪನ್ಯಾಸ ಮಾಲೆಯ ಆಶ್ರಯದಲ್ಲಿ ತಾಳ್ತಜೆಯವರು ನೀಡಿದ ದತ್ತಿ ಉಪನ್ಯಾಸವಾಗಿದ್ದು ಇದನ್ನು ಅಲ್ಲಿಯ ಪ್ರಸಾರಾಂಗವು ಪ್ರಕಟಿಸಿದ್ದು ಇದು ಕನ್ನಡ ನಾನಾರ್ಥ ಪದಕೋಶದ ವಿಧಿವಿಧಾನಗಳನ್ನು ತಿಳಿಸುವ ಕೃತಿಯಾಗಿದೆ.

''ದಾಸ ಸಾಹಿತ್ಯ ಒಂದು ಪರಿಶೀಲನೆ'' ಎಂಬ ಕೃತಿಯನ್ನು ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ ಹೊರತಂದಿದೆ. ಕಳೆದ ವರ್ಷ ಗುಲಬರ್ಗಾ ವಿ.ವಿ.ಯಲ್ಲಿ ಡಾ. ತಾಳ್ತಜೆ ಅವರು ನೀಡಿದ ವಿಶೇಷ ದತ್ತಿ ಉಪನ್ಯಾಸದ ವಿಸ್ತೃತ ರೂಪವು ಇದಾಗಿದೆ. ದಾಸ ಸಾಹಿತ್ಯದ ಪ್ರೇರಣೆಗಳು ಅದರ ಸಾಂಸ್ಕೃತಿಕ ಸಾಮಾಜಿಕ ಒಳನೋಟಗಳ ಅಧ್ಯಯನದ ಸಾಧ್ಯತೆಗಳನ್ನು ಈ ಕೃತಿ ಒಳಗೊಂಡಿದೆ.

## ವೀರ ಕೇಸರಿ ಕಲಾವೃಂದ ಅಂತರ ಶಾಲಾ ಕ್ರೀಡಾ ಸ್ಪರ್ಧೆ

ಮುಂಬೈಯಲ್ಲಿರುವ ಎಲ್ಲಾ ಕನ್ನಡ ಶಾಲೆಗಳ ಮಕ್ಕಳ ಕ್ರೀಡಾಕೂಟವನ್ನು ವೀರ ಕೇಸರಿ ಕಲಾವೃಂದ ದಹಿಸರು ಇವರು ತಾ. 26-1-2001ರಂದು ನಗರದ ಖಾಲ್ಸಾ ಕಾಲೇಜಿನಲ್ಲಿ ನಡೆಸಿದ್ದರು. ರಾತ್ರಿ ಶಾಲಾ ಮಕ್ಕಳ ಕ್ರೀಡಾ ಕೂಟವನ್ನು ಬೆಳಿಗ್ಗೆ 8-30 ಘಂಟೆಗೆ ಮತ್ತು ಹಗಲು ಶಾಲೆಯ ಮಕ್ಕಳ ಕ್ರೀಡಾ ಕೂಟವನ್ನು ಬೆಳಿಗ್ಗೆ 10-30 ಘಂಟೆಗೂ ಪ್ರಾರಂಭವಾಯಿತು. ಈ ಸಮಾರಂಭದ ಸಮಾರೋಪ ಸಭಾಕಾರ್ಯಕ್ರಮವು ಶ್ರೀ ಜಯ ಸಿ. ಸುವರ್ಣರ ಅಧ್ಯಕ್ಷತೆಯಲ್ಲಿ ಜರುಗಿತು. ಕನ್ನಡ ವಾರ್ತಾಪತ್ರಿಕೆಗಳ ಪತ್ರಕರ್ತರು ಮತ್ತು ಅನೇಕ ಗೌರವಾನ್ವಿತ ಮುಂಬೈ ಕನ್ನಡಿಗರು ಈ ಸಮಾರಂಭದಲ್ಲಿ

ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಈ ಕ್ರೀಡಾ ಕೂಟದಲ್ಲಿ ಹಗಲು ಶಾಲೆಯ ಪ್ರಾಥಮಿಕ ವಿಭಾಗದ ಚಾಂಪಿಯನ್ ಶಿಪ್‌ನ್ನು ಗೋರೆಗಾಂವಿನ ಐ.ಬಿ. ಪಟೇಲ್ ಮುನ್ಸಿಪಲ್ ಸ್ಕೂಲಿನ ವಿದ್ಯಾರ್ಥಿಗಳು, ಮಾಧ್ಯಮಿಕ ವಿಭಾಗದ ಚಾಂಪಿಯನ್ ಶಿಪನ್ನು ವಡಾಲಾದ ಎನ್.ಕೆ.ಇ.ಎಸ್. ಶಾಲೆಯ ವಿದ್ಯಾರ್ಥಿಗಳು ಪಡೆದುಕೊಂಡರು. ರಾತ್ರಿ ಶಾಲಾ ವಿಭಾಗದ ಚಾಂಪಿಯನ್ ಶಿಪನ್ನು ಯಂಗ್ ಮೆನ್ಸ್ ನೈಟ್ ಹೈಸ್ಕೂಲ್ ಮಕ್ಕಳು ಪಡೆದುಕೊಂಡರು.

### ಮಕ್ಕಳ ಮೇಳ

ಕರ್ನಾಟಕದ ಸಂಘ ಮುಂಬಯಿ ಇದರ ಮಹಿಳಾ ವಿಭಾಗದವರು ಮಕ್ಕಳ ಮೇಳವನ್ನು ಮಾಟುಂಗಾ ವಿಶ್ವೇಶ್ವರಯ್ಯ ಸಭಾಗೃಹದಲ್ಲಿ ಆಯೋಜಿಸಿದ್ದರು.

ಈ ಮಕ್ಕಳ ಮೇಳವನ್ನು ಮುಂಬಯಿ ಮಹಾನಗರ ಪಾಲಿಕೆಯ 50 ಕನ್ನಡ ಮಾಧ್ಯಮಗಳಲ್ಲಿಯ ಪ್ರತಿಭಾನ್ವಿತ ಮಕ್ಕಳು ಉದ್ಘಾಟಿಸಿದರು. ಈ ಕಾರ್ಯಕ್ರಮದ ಪ್ರಯುಕ್ತ ಅಂತರ್‌ಶಾಲಾ ಪ್ರತಿಭಾ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಸುಮಾರು ಮುಂಬಯಿಯ ಎಲ್ಲಾ ಕನ್ನಡ ಶಾಲೆಗಳ ಮಕ್ಕಳು, ಶಿಕ್ಷಕರು ಮತ್ತು ಪಾಲಕರು ಈ ಸಮಾರಂಭದಲ್ಲಿ ಭಾಗವಹಿಸಿ ಸಮಾರಂಭವು ಅತೀ ಯಶಸ್ವಿಯಾಗುವುದರಲ್ಲಿ ಸಹಕರಿಸಿದರು.

ಸಾಯಂಕಾಲ 4 ಘಂಟೆಯವರೆಗೆ ಸ್ಪರ್ಧೆಗಳು ನಡೆದು ತದನಂತರ ಸಮಾರೋಪ ಸಭಾಕಾರ್ಯ ಕ್ರಮವು ಜರಗಿತು. ಸಮಾರೋಪ ಸಮಾರಂಭದ ಅಧ್ಯಕ್ಷ ಸ್ಥಾನವನ್ನು ಸಂಘ ಕಾರ್ಯದರ್ಶಿ ಶ್ರೀ ರವಿ ರಾ. ಅಂಚನ್ ಇವರು ವಹಿಸಿದ್ದರು. ಅನೇಕ ಗಣ್ಯ ಕನ್ನಡಿಗರು ಈ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಅನೇಕ ಗಣ್ಯ ಕನ್ನಡಿಗರು ಈ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಮೇಳದ ಬಗ್ಗೆ ಮುಂಬೈ ಮಹಾನಗರ, ಶಿಕ್ಷಣಾಧಿಕಾರಿ ಶ್ರೀಮತಿ ಶಾರದಾ ಶೆಟ್ಟಿ ಮತ್ತು ಹಿರಿಯ ಶಿಕ್ಷಕ ಶ್ರೀ ಎ.ಪಿ. ವೇಘರಾಜರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಅಂತರಶಾಲಾ ಸ್ಪರ್ಧೆಗಳಲ್ಲಿ ಬಹುಮಾನ ಗಳಿಸಿದ ಎಲ್ಲಾ ಮಕ್ಕಳನ್ನು ಬಹುಮಾನ ಕೊಟ್ಟು ಸನ್ಮಾನಿಸಲಾಯಿತು. ಪ್ರತಿಭಾ ಸ್ಪರ್ಧೆಗಳಲ್ಲಿ ಕಿರಿಯ ಪ್ರಾಥಮಿಕ ವರ್ಗದ ಚಾಂಪಿಯನ್ ಶಿಪ್ ಫಲಕವು ದೀನ ದಯಾಳ ಮುನ್ಸಿಪಲ್ ಶಾಲೆಗೂ ಹಿರಿಯ ಪ್ರಾಥಮಿಕ ವರ್ಗದ ಫಲಕವು ಪಿರೇರಾವಾಡಿ ಮುನ್ಸಿಪಲ್ ಶಾಲೆಗೂ ಮತ್ತು ಮಾಧ್ಯಮಿಕ ವರ್ಗದ ಫಲಕವು ವಡಾಲಾದ ಎನ್.ಕೆ.ಇ.ಎಸ್. ಶಾಲೆಗೆ ದೊರಕಿತು.

ಬಹುಮಾನ ವಿತರಣೆಯನ್ನು ಸಂಘದ ಉಪಾಧ್ಯಕ್ಷ ಶ್ರೀ ಗಣೇಶ್ ನಾಯಕ, ಶ್ರೀಮತಿ ಗಾಯತ್ರಿ ರಾಮು ಮತ್ತು ಶ್ರೀ ರವಿ ರಾ. ಅಂಚನ್ ಮಾಡಿದ್ದು, ಡಾ. ಸರಸ್ವತಿ ಶೆಟ್ಟಿ ವಂದನಾರ್ಪಣೆ ಗೈದರು.

### ಶ್ರೇಷ್ಠ ಹೊರನಾಡ ಕನ್ನಡಿಗ ಪ್ರಶಸ್ತಿಗೆ ಪ್ರೊ. ಇಂದಿರೇಶನ್ ಆಯ್ಕೆ

ಚೆನ್ನೈನ ಐ.ಐ.ಟಿ. ಮಾಜಿ ನಿರ್ದೇಶಕರೂ, ಶಿಕ್ಷಣ ತಜ್ಞರೂ ಆದ ಪ್ರೊ. ಪಿ.ವಿ. ಇಂದಿರೇಶನ್ ಅವರು 'ದೆಹಲಿ ಕನ್ನಡಿಗ' ಪತ್ರಿಕೆ ಸ್ಥಾಪಿಸಿರುವ ಈ ಸಾಲಿನ ಪ್ರತಿಷ್ಠಿತ 'ಶ್ರೇಷ್ಠ ಹೊರನಾಡ ಕನ್ನಡಿಗ ' ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

'ದೆಹಲಿ ಕನ್ನಡಿಗ' ಪತ್ರಿಕೆ ಸಂಪಾದಕ ಬಾ.ಸಾಮಗ ಅವರು ಈ ಆಯ್ಕೆಯನ್ನು ಇಲ್ಲಿ ಪ್ರಕಟಿಸಿದರು.

ಈ ಪ್ರಶಸ್ತಿಯನ್ನು ಉನ್ನತ ತಜ್ಞರ ಸಮಿತಿಯು ಆಯ್ಕೆ ಮಾಡಿದೆ ಎಂದು ಸಾಮಗ ಅವರು ಹೇಳಿದರು. ಪ್ರಶಸ್ತಿಯು ಶಾಲು ಮತ್ತು ಪ್ರಶಸ್ತಿ ಪತ್ರವನ್ನೊಳಗೊಂಡಿದ್ದು, ದಿಲ್ಲಿಯಲ್ಲಿ ಎಪ್ರಿಲ್ 7 ರಂದು ನಡೆಯುವ 18ನೇ ರಾಷ್ಟ್ರೀಯ ಕನ್ನಡ ಸಮ್ಮೇಳನದಲ್ಲಿ ನೀಡಲಾಗುವುದು.

ಈ ಸಮ್ಮೇಳನದಲ್ಲಿ ನೀಡಲಾಗುವ 'ದೆಹಲಿ ಕನ್ನಡಿಗ'ದ ಇತರ ಪ್ರಶಸ್ತಿಗಳ ಆಯ್ಕೆಯನ್ನು ಸಾಮಗ ಅವರು ಹೀಗೆ ಪ್ರಕಟಿಸಿದರು. 'ಶ್ರೇಷ್ಠ ದೆಹಲಿ ಕನ್ನಡಿಗ' ಪ್ರಶಸ್ತಿಗೆ ಜವಾಹರಲಾಲ್ ನೆಹರೂ ವಿಶ್ವವಿದ್ಯಾನಿಲಯದ ಕ್ಯಾನ್ಸರ್ ಸಂಶೋಧನಾ ಕೇಂದ್ರದ ಮುಖ್ಯಸ್ಥರೂ, ಹಿರಿಯ ಪ್ರಾಧ್ಯಾಪಕರೂ ಆದ ಡಾ. ಎ. ರಮೇಶ್ ರಾವ್ ಅವರು ಆಯ್ಕೆಯಾಗಿದ್ದಾರೆ.

ಟಿ.ಎ. ಪೈ ಸ್ಮಾರಕ 'ಶ್ರೇಷ್ಠ ಬ್ಯಾಂಕರ್' ಪ್ರಶಸ್ತಿಗೆ ಸಿಂಡಿಕೇಟ್ ಬ್ಯಾಂಕಿನ ಅಧ್ಯಕ್ಷ ಹಾಗೂ ಆಡಳಿತ ನಿರ್ದೇಶಕರಾಗಿರುವ ಡಿ.ಟಿ.ಪೈ ಅವರು ಆಯ್ಕೆಯಾಗಿದ್ದಾರೆ.

ವಿವಿಧ ರಂಗಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಕನ್ನಡಿಗರನ್ನು ಈ ಸಮ್ಮೇಳನದಲ್ಲಿ ಸನ್ಮಾನಿಸಲಾಗುವುದೆಂದು ಸಾಮಗ ಅವರು ತಿಳಿಸಿದ್ದಾರೆ.

### ದಿಲ್ಲಿಯಲ್ಲಿ ಶ್ರದ್ಧಾಂಜಲಿ ಸಭೆ
### ಕನ್ನಡ ಸಂಸ್ಕೃತಿಯಲ್ಲಿ ಡಾ. ಆಳ್ವ ಅಮರ

ಬೆಂಗಳೂರಲ್ಲಿ ನಿಧನರಾದ ಕರ್ನಾಟಕದ ಮಾಜಿ ಸಚಿವ, ಪ್ರತಿಭಾವಂತ ರಾಜಕೀಯ ನೇತಾರ ಡಾ. ಜೀವರಾಜ ಆಳ್ವ ಅವರು ತಮ್ಮ ಸಾಂಸ್ಕೃತಿಕ ಚಟುವಟಿಕೆಗಳಿಂದ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಅಮರರಾಗಿದ್ದು ಅವರ ಸ್ಮಾರಕವಾಗಿ ಕರ್ನಾಟಕ ಸರಕಾರ ದೆಹಲಿಯಲ್ಲಿ ಕರ್ನಾಟಕ ಸಂಸ್ಕೃತಿ ಉತ್ಸವ ನಡೆಸಿ ಕರ್ನಾಟಕ ಸಂಗ್ರಹಾಲಯವನ್ನು ಸ್ಥಾಪಿಸಬೇಕೆಂದು 'ದೆಹಲಿ ಕನ್ನಡಿಗ'ಪತ್ರಿಕೆ ಸಂಪಾದಕ ಬಾ. ಸಾಮಗ ಅವರು ಆಗ್ರಹ ಪಡಿಸಿದರು.

ದೆಹಲಿಯಲ್ಲಿ ಫೆ. 17ರಂದು ನಡೆದ ಡಾ. ಜೀವರಾಜ ಆಳ್ವ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಗಣ್ಯ ಕನ್ನಡಿಗರು ಆಳ್ವ ಅವರು ನಾಡು, ನುಡಿಗೆ ಸಲ್ಲಿಸಿದ ಸೇವೆಯನ್ನು ಕೊಂಡಾಡಿದರು.

ಕರ್ನಾಟಕ ಸಂಸ್ಕೃತಿ ವೈಭವನ್ನು ವಿಶ್ವದಾದ್ಯಂತ ಪುನರುತ್ಥಾನಗೊಳಿಸುವ ಯೋಜನೆಯಲ್ಲಿ 95ರಲ್ಲಿ ಕಲ್ಕತ್ತದಲ್ಲಿ ನಡೆದ ಮೂರನೇ ಅಖಿಲ ಭಾರತ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಸಮ್ಮೇಳನವನ್ನು ಡಾ. ಆಳ್ವ ಅವರು ಉದ್ಘಾಟಿಸಿದ್ದನ್ನು ಸ್ಮರಿಸಿಕೊಂಡ ಸಾಮಗ ಅವರು ಹೊರನಾಡಲ್ಲಿ ಕನ್ನಡ ಸಂಸ್ಕೃತಿ ಪ್ರಚಾರವನ್ನು ಬಹುವಾಗಿ ಬೆಂಬಲಿಸಿದ ಆಳ್ವ ಅವರು ಕನ್ನಡತನವನ್ನು ರಕ್ತಗತವಾಗಿಸಿಕೊಂಡು ಕನ್ನಡ ಕಾರ್ಯಕ್ರಮಗಳಲ್ಲಿ ಸ್ಥಾನಮಾನ ಪರಿಗಣಿಸದೆ ಸಾಮಾನ್ಯ ಕಾರ್ಯಕರ್ತರಂತೆ ದುಡಿಯುತ್ತಿದ್ದ ರೆಂದರು.

ಕಲಾವಿದೆ ಶ್ರೀಮತಿ ಕೋಮಲಾ ವರದನ್ ಅವರು ಕಲಾರಂಗದಲ್ಲಿ ವಿಶೇಷ ಆಸಕ್ತಿ ವಹಿಸಿದ್ದ ಡಾ. ಆಳ್ವ ಅವರು ಸಂಸ್ಕೃತಿ ಸಚಿವರಾಗಿದ್ದಾಗ ಕನ್ನಡಿಗರಲ್ಲಿ ನೂತನ ಚೇತನ ತುಂಬಿದ್ದರೆಂದರಲ್ಲದೆ ಕಲಾವಿದರಿಗೆ ಬೆಂಬಲ ನೀಡುವ ಆಳ್ವ ಅವರ ಗುಣವನ್ನು ರಾಜಕಾರಣಿಗಳು ಆದರ್ಶವಾಗಿರಿಸಿ ಕೊಳ್ಳಬೇಕೆಂದರು.

ರಾಜ್ಯ ಸಭಾ ಸದಸ್ಯ ಆಸ್ಕರ್ ಫೆರ್ನಾಂಡೀಸ್ ಅವರು ಸಂಘಟನಾ ಚತುರರಾದ ಆಳ್ವ ಅವರು ಕನ್ನಡ ಕಾರ್ಯದಲ್ಲಿ ರಾಜಕೀಯ ಪಕ್ಷಭೇದ ಮರೆತು ಶ್ರಮಿಸುತ್ತಿದ್ದರಲ್ಲದೆ ಮಾತೃ ಭಾಷೆಯ ಮಮತೆ ಅವರ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಾಗಿತ್ತೆಂದರು.

ಜವಾಹರಲಾಲ್ ವಿಶ್ವವಿದ್ಯಾನಿಲಯದ ಹಿರಿಯ ಪ್ರಾಧ್ಯಾಪಕ ಹಾಗೂ ಸಮಾಜ ಶಾಸ್ತ್ರಜ್ಞ ಡಾ| ಸಿ. ಎನ್. ವೇಣುಗೋಪಾಲ್ ಅವರು ಎಲ್ಲಾ ಜಾತಿ ಮತ ವರ್ಗದವರಿಗೆ ಸಮಾನವಾಗಿ ಬೆರೆತು ಸಮಾಜ ಸೌಹಾರ್ದಯುತವಾಗಿರಲು ಶ್ರಮಿಸಿದ ಆಳ್ವ ಅವರು ಕನ್ನಡಿಗರ ಉತ್ತಮ ಗುಣಗಳಿಗೆ ಆದರ್ಶವಾಗಿದ್ದು, ಎಲ್ಲಾ ಕಡೆ ಮೆಚ್ಚುಗೆ ಗಳಿಸಿದ್ದರೆಂದರು.

ಪಂಜಾಬ್ ನ್ಯಾಶನಲ್ ಬ್ಯಾಂಕಿನ ಜನರಲ್ ಮೇನೇಜರ್ ಕೆ. ಎನ್. ಪೃಥ್ವಿರಾಜ್ ಅವರು ಕರ್ನಾಟಕದ ಸಾಂಸ್ಕೃತಿಕ ಬೆಳೆವಣಿಗೆಗೆ ಕರ್ನಾಟಕ ಆರ್ಥಿಕ ಪ್ರಗತಿ ಹೊಂದಬೇಕೆಂದು ನಂಬಿಕೊಂಡಿದ್ದು ಆಳ್ವ ಅವರು ಬಡವ, ದೀನ, ದಲಿತರಿಗೆ ಸಹಾಯ ಮಾಡುವಲ್ಲಿ ಮುಂದಾಗಿದ್ದರೆಂದರಲ್ಲದೆ ಬದುಕಿನ ಕಷ್ಟಕಾರ್ಪಣ್ಯಗಳಿಗೆ ಸ್ಪಂದಿಸುತ್ತಿದ್ದರೆಂದರು.

ಹೊರನಾಡಿನ ಕನ್ನಡ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದ ಡಾ. ಆಳ್ವ ಅವರ ಭಾವ ಚಿತ್ರಗಳ ಪ್ರದರ್ಶನವನ್ನು ಇದೇ ಸಂದರ್ಭದಲ್ಲಿ ಏರ್ಪಡಿಸ ಲಾಗಿತ್ತು.

Regn. No. 040015/86
Regn. No. TECH/47-202/MBI-2001
Date of Posting : 15-3-2001

# 'ಇಂದಿನ ಭಾರತ ನಾಳಿನ ಜಗತ್ತಿನ ಮಾರ್ಗದರ್ಶಿ' -ಪಂಡಿತ್ ಜವಾಹರ್‌ಲಾಲ್ ನೆಹರು-1950
# ನವಭಾರತದ ಹರಿಕಾರ ಭವಿಷ್ಯವಾಣಿಯನ್ನು ಸಾಕಾರಗೊಳಿಸುತ್ತ
# ಕರ್ನಾಟಕ ತೀವ್ರಗತಿಯಲ್ಲಿ ಮುನ್ನಡೆಯುತ್ತಿದೆ.

ಕರ್ನಾಟಕವು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನವೂ ಸೇರಿದಂತೆ ಆಧುನಿಕ ತಂತ್ರಜ್ಞಾನಗಳ ಆವಿಷ್ಕಾರಗಳನ್ನು ಪೂರ್ಣ ಪ್ರಮಾಣ ದಲ್ಲಿ ಬಳಸಿಕೊಂಡು ದೇಶದಲ್ಲೇ ಮುಂಚೂಣಿಯಲ್ಲಿರುವ ರಾಜ್ಯ. ಮಾಹಿತಿ ತಂತ್ರ ಮತ್ತು ಜೈವಿಕ ವಿಜ್ಞಾನಗಳ ನಡುವೆ ಸಮನ್ವಯ ಸಾಧಿಸಿ ಕೃಷಿ, ಕೈಗಾರಿಕೆ, ಆರೋಗ್ಯ ಶಿಕ್ಷಣ, ವಿದ್ಯುಚ್ಛಕ್ತಿ ಗ್ರಾಮೀಣಾಭಿವೃದ್ಧಿಗಳಂತಹ ಆದ್ಯ ವಲಯಗಳ ಅಭಿವೃದ್ಧಿಗಾಗಿ ಬಳಸಿಕೊಳ್ಳುತ್ತಿದೆ. ಅಂತೆಯೇ ಸಂವಿಧಾನ ನಿರ್ಮಾತೃಗಳು ದೇಶದ ಸಾರ್ವಭೌಮತ್ವ ಮತ್ತು ಸಮಗ್ರತೆಗಾಗಿ ಹೊಂದಿದ ಸದಾಶಯಗಳನ್ನು ಸಂರಕ್ಷಿಸುತ್ತಾ ಶಾಂತಿ ಹಾಗೂ ಸಮೃದ್ಧಿಗಳನ್ನು ತರುವ ದಿಸೆಯಲ್ಲಿ ರಾಜ್ಯವು ಮಾರ್ಗದರ್ಶಿಯಾಗಿದೆ.

**ಸಾಧನೆಯ ಪಕ್ಷಿ ನೋಟ:-**

ಮೂಲಭೂತ ಸೌಲಭ್ಯಗಳ ಅಭಿವೃದ್ಧಿ:- ರಸ್ತೆಗಳು:- ★ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ಸ್ಥಾಪನೆ 13,000 ಕಿ.ಮೀ. ಉದ್ದದ ಗ್ರಾಮೀಣ ರಸ್ತೆಗಳು ಹಾಗೂ 17 ಕಿಮೀ ಉದ್ದದ ಸೇತುವೆಗಳನ್ನು ಉತ್ತಮಗೊಳಿಸಲು ರೂ. 348 ಕೋಟಿಗೂ ಹೆಚ್ಚು ಮೊತ್ತದ ವೆಚ್ಚ. ★ ಫೆಬ್ರುವರಿ 2002 ವೇಳೆಗೆ 153 ರಸ್ತೆ ನಿರ್ಮಾಣ ಯೋಜನೆಗಳು ರೂ. 95 ಕೋಟಿ ವೆಚ್ಚದಲ್ಲಿ ಪೂರ್ಣ. ★ ಬೆಂಗಳೂರು-ಮೈಸೂರು ರಾಜ್ಯ ಹೆದ್ದಾರಿಯನ್ನೂ ಒಳಗೊಂಡು ಹಲವು ಪ್ರಮುಖ ರಸ್ತೆಗಳ ಅಭಿವೃದ್ಧಿ ಕಾರ್ಯ. ರೂ. 568 ಕೋಟಿ ವೆಚ್ಚದಲ್ಲಿ 625.6 ಕಿಲೋ ಮೀಟರ್‌ಗಳ ಉದ್ದದ ರಸ್ತೆ ಕಾಮಗಾರಿ ★ 2000 ಕಿಮೀ ಉದ್ದದ ರಸ್ತೆ ಉತ್ತಮಗೊಳಿಸಲು ರೂ. 1,901 ಕೋಟಿ ವೆಚ್ಚದ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ★ ರೂ. 151 ಕೋಟಿ ವೆಚ್ಚದಲ್ಲಿ 8,500 ಕಿ.ಮೀ. ಉದ್ದದ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಕಾರ್ಯ. **ಕುಡಿಯುವ ನೀರು:-** ★ ಗ್ರಾಮೀಣ ಹಾಗೂ ಪಟ್ಟಣ ಕುಡಿಯುವ ಸರಬರಾಜಿಗಾಗಿ ಟೆಕ್ನಾಲಜಿ ಮಿಷನ್ ಸ್ಥಾಪನೆ ★ 3,000 ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು ಸರಬರಾಜು ★ 2000-2001ನೇ ಸಾಲಿನಲ್ಲಿ ಗ್ರಾಮೀಣ ಕುಡಿಯುವ ನೀರು ಯೋಜನೆಗಳಿಗಾಗಿ ರೂ. 345.55 ಕೋಟಿ ಮೀಸಲು ★ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಯೋಜನೆ ರೂ. 447 ಕೋಟಿ ವೆಚ್ಚದಲ್ಲಿ 1,105 ಗ್ರಾಮಗಳಲ್ಲಿ ಅನುಷ್ಠಾನ ★ ಮುಂದಿನ ನಾಲ್ಕು ವರ್ಷಗಳಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯೀಕರಣಕ್ಕಾಗಿ ರೂ. 4,444 ಕೋಟಿ ಮೀಸಲು. **ವಿದ್ಯುಚ್ಛಕ್ತಿ:-** ★ ಕೃಷ್ಣಾ ಮೇಲ್ದಂಡೆ ಯೋಜನೆ (1,107 ಮೆ.ವಾ.), ವಿಜಯನಗರ ಶಾಖೋತ್ಪನ್ನ ಸ್ಥಾವರ (500 ಮೆ.ವಾ.), ಗೇರುಸೊಪ್ಪ (240 ಮೆ.ವಾ.), ರಾಯಚೂರು ಶಾಖೋತ್ಪನ್ನ 7ನೇ ಘಟಕ (210 ಮೆ.ವಾ.) ಹಾಗೂ ಬಿಡದಿ (200 ಮೆ.ವಾ.) ಮುಂತಾದ ಮುಖ್ಯ ವಿದ್ಯುದುತ್ಪಾದನಾ ಯೋಜನೆಗಳಿಂದಾಗಿ ಪ್ರಸಕ್ತ ವಿದ್ಯುದುತ್ಪಾದನೆಗೆ 2,257 ಮೆ.ವಾ. ಸೇರ್ಪಡೆ. **ಗ್ರಾಮೀಣಾಭಿವೃದ್ಧಿ:-** ★ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಗ್ರಾಮ ಸಭೆಗಳ ಮೂಲಕ ಶ್ರೀ ಸಾಮಾನ್ಯನಿಗೆ ಪ್ರಮುಖ ಪಾತ್ರ. ★ 1,000 ಗ್ರಾಮಗಳಲ್ಲಿ ಹುಡ್ಕೋ ನೆರವಿನೊಂದಿಗೆ ರೂ. 200 ಕೋಟಿ ವೆಚ್ಚದ ಪಂಚಸೂತ್ರಗಳುಳ್ಳ ಸ್ವಚ್ಛ ಗ್ರಾಮ ಯೋಜನೆ. ★ ಗ್ರಾಮೀಣ ಯುವಜನರು ಲಘು ಉದ್ಯಮಗಳನ್ನು ಪ್ರಾರಂಭಿಸಲು ಪರಿಕರ ಸೌಲಭ್ಯಗಳಿಗಾಗಿ ರೂ. 19 ಕೋಟಿ ಮೀಸಲು ★ ಗ್ರಾಮೀಣ ಯುವ ಜನರಿಗೆ ಮಾಹಿತಿ ತಂತ್ರಜ್ಞಾನ ಸಂಬಂಧಿತ ಕ್ಷೇತ್ರಗಳಲ್ಲಿ ತರಬೇತಿ ನೀಡಲು ಯುವ.ಕಾಮ್ ಸ್ಥಾಪನೆ ★ ಬೇರುಮಟ್ಟದಲ್ಲಿ ಅಧಿಕಾರ ವಿಕೇಂದ್ರೀಕರಣ. **ಆರೋಗ್ಯ:-** ರಾಯಚೂರಿನಲ್ಲಿ ಒಪೆಕ್ ನೆರವಿನ 350 ಹಾಸಿಗೆಗಳ ರಾಜೀವ್‌ಗಾಂಧಿ ಸ್ಮಾರಕ ಸ್ಪೆಷಾಲಿಸ್ಟ್ ಆಸ್ಪತ್ರೆಯ ಉದ್ಘಾಟನೆ. **ಶಿಕ್ಷಣ:-** ★ 11,000 ಅಪೂರ್ಣ ಶಾಲಾ ಕೊಠಡಿಗಳು ಪೂರ್ಣ ★ ಪಿಯುಸಿ ಹಂತದವರೆಗೆ ಬಾಲಕಿಯರಿಗೆ ವ್ಯಾಸಂಗ ಶುಲ್ಕ ವಿನಾಯಿತಿ ★ ಶಾಲೆ ತೊರೆದ 3.90 ಲಕ್ಷ ಮಕ್ಕಳನ್ನು ಪುನಃ ಶಾಲೆಗೆ ಸೇರಿಸಲು ವಿಶೇಷ ಆಂದೋಲನ ★ ಶಾಲೆಗಳಿಗೆ ಸೇರದ ಎಲ್ಲಾ ಮಕ್ಕಳನ್ನೂ ಮುಂದಿನ 3 ವರ್ಷಗಳ ಅವಧಿಯಲ್ಲಿ ಶಾಲೆಗೆ ಸೇರಿಸಲು ಅಕ್ಷರ ಯೋಜನೆ ★ 1000 ಸರಕಾರಿ ಶಾಲೆಗಳಲ್ಲಿ ಮಾಹಿತಿ ತಂತ್ರಜ್ಞಾನ ಸಂಬಂಧಿತ ವ್ಯಾಸಂಗದ ಅನುಷ್ಠಾನ. **ಕೃಷಿ:-** ಕೃಷಿ ವಿಮಾ ಯೋಜನೆಯಡಿ ರೂ. 100 ಕೋಟಿ ನೆರವು. **ವಸತಿ:-** ★ ಗ್ರಾಮೀಣ ವಸತಿಗೆ ಹೆಚ್ಚು ಒತ್ತು. ಆರ್ಥಿಕವಾಗಿ ಹಿಂದುಳಿದವರಿಗಾಗಿ ವರ್ಷಕ್ಕೆ 2 ಲಕ್ಷ ಮನೆಗಳನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಸ್ಥಾಪನೆ **ಇತರ ಪ್ರಮುಖ ಯೋಜನೆಗಳು:-** ಬೆಂಗಳೂರಿನ ಬಳಿ ದೇವನ ಹಳ್ಳಿಯಲ್ಲಿ ರೂ. 1000 ಕೋಟಿ ವೆಚ್ಚದ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಮಾಣಕ್ಕೆ ಚಾಲನೆ.

**52ನೇ ಗಣರಾಜ್ಯೋತ್ಸವದ ಶುಭಾಶಯಗಳು**

ಬೆಂಗಳೂರು-ಆಧುನಿಕ ಭಾರತದ ಅದ್ಭುತ ನಗರ

'ಈ ಮುಂಚೆ ವಿದೇಶಿ ಗಣ್ಯರು ಭಾರತಕ್ಕೆ ಭೇಟಿ ನೀಡಿದಾಗಲೆಲ್ಲ ವಿಶ್ವವಿಖ್ಯಾತ ತಾಜ್‌ಮಹಲ್‌ಗೆ ಭೇಟಿ ನೀಡಿದಾಗಲೇ ಅವರಿಗೆ ತೃಪ್ತಿಯುಂಟಾಗುತ್ತಿತ್ತು. ಆದರೀಗ ಅವರಿಗೆ ಈ ದೇಶದ ಭೇಟಿಯ ಸಂದರ್ಭದಲ್ಲಿ ಆಧುನಿಕ ಭಾರತದ ಸೋಜಿಗ-ಬೆಂಗಳೂರಿನ ಮಾಹಿತಿ ತಂತ್ರಜ್ಞಾನ ಕೇಂದ್ರಗಳಿಗೆ ಭೇಟಿ ನೀಡಿದಾಗಲೇ ಸಮಾಧಾನವಾಗುವುದು.

- ಎ.ಬಿ. ವಾಜಪೇಯಿ, ಪ್ರಧಾನ ಮಂತ್ರಿಗಳು

ಶಾಂತಿ ಹಾಗೂ ಸಮೃದ್ಧಿಯನ್ನು ಬೆಳೆಸಲು ನಾವೆಲ್ಲರೂ ವಚನಬದ್ಧರಾಗೋಣ

ಕರ್ನಾಟಕ ವಾರ್ತೆ

Edited, Printed & Published by M.A.N. Prasad, On behalf of the Mysore Association, Mumbai. Tel.: 402 46 47
Printed at Aarati Art Printers, Fort, Mumbai-400 001. * 266 33 61 / 266 59 38